www.vijayadasaru.net



# ನ ಮಾಧವ ಸಮೋ ದೇವಃ : ನ ಚ ಮಧ್ವ ಸಮೋ ಗುರುಃ

ನಾವು ಯಾರು ಯಾರಿಗೆ ಎಷ್ಟೆಷ್ಟು ತುಷ್ಟೀಕರಣದ ಮಾತುಗಳನ್ನಾಡೋಣ ? ಹೆಜ್ಜೆ ಹೆಜ್ಜೆಗೂ ಯಾರು ಯಾರನ್ನು ಎಷ್ಟೆಂದು ಸ್ತುತಿಸೋಣ ? ಯಾರು ಯಾರನ್ನು ಸಂತೃಪ್ತಿಗೊಳಿಸಲು ಎಷ್ಟೆಂದು ಧನಕನಕಾದಿಗಳನ್ನು ಕೊಡೋಣ ? ಪಾಮರಜನರ ನಿರಂತರ ಶುಶ್ರೂಷೆಯಿಂದ ನಮಗಾಗುವ ಪ್ರಯೋಜನವಾದರೂ ಏನು ? ಅಂದರೆ ನಮ್ಮಂತೆಯೇ ಅಪರಿಪೂರ್ಣರೂ, ಅಸ್ವತಂತ್ರರೂ, ಅಸಮರ್ಥರೂ ಆದ ಲೋಕದ ಜನರಿಗೆ ಪ್ರಿಯವಚನಗಳನ್ನೇ ನುಡಿಯುತ್ತಾ ಹೆಜ್ಜೆಹೆಜ್ಜೆಗೂ ಹೊಗಳಿ ಅವರಿಗಿಷ್ಟವಾದ ಕಾಣಿಕೆಗಳನ್ನು ಎಷ್ಟು ನೀಡಿದರೂ ಅವರು ಪೂರ್ಣಸಂತುಷ್ಟರಾಗಲು ಸಾಧ್ಯವಿಲ್ಲ. ಮತ್ತು ಇಂತಹ ಪಾಮರ ಜನರ ಅನುಸರಣದಿಂದ ನಮಗೆ ಶಾಶ್ವತ ಪ್ರಯೋಜನವು ಹೇಗೆ ತಾನೆ ದೊರೆಯಲು ಸಾಧ್ಯ? ಆದ್ದರಿಂದ ನಾವು ನಿತ್ಯ ಪರಿಪೂರ್ಣನೂ, ಸ್ವತಂತ್ರನೂ, ಸರ್ವಸಮರ್ಥನೂ, ಸರ್ವ ರಕ್ಷಕನೂ, ಭಕ್ತವತ್ಸಲನೂ ಆದ ಭಗವಂತನಲ್ಲೇ ಅಚಲ ಭಕ್ತಿಯನ್ನು ಹೊಂದಿ ಆಧ್ಯಾತ್ಮಿಕ ಕರ್ತವ್ಯಗಳಲ್ಲಿ ನಿಷ್ಠೆಯನ್ನು ಬೆಳಸಿಕೊಳ್ಳಬೇಕು. ಅದರಿಂದ ಶಾಶ್ವತ ಮಹಾಪುರುಷಾರ್ಥವನ್ನು ಪಡೆಯಬೇಕು.

ಭಾ ವೀ ಸ ಮೀ ರ

ಶ್ರೀ ಮ ದ್ವಾ ದಿ ರಾ ಜ ಗು ರು ಸಾ ರ್ವ ಭೌ ಮ ರು

www.vijayadasaru.net



ಇಂದ್ರಿಯಗಳು ಸುದೃಢವಾಗಿರುವಾಗಲೇ ಭಗವಂತನ ಸ್ಮರಣೆಯನ್ನು ನಾವು ಮಾಡಬೇಕು. ವಯಸ್ಸಾದ ಮೇಲೆ ವಾರ್ಧಕ್ಯ-ದಲ್ಲಿ ದೇವರ ಸ್ಮರಣೆಯನ್ನು ಮಾಡೋಣವೆಂದು ಭಾವಿಸಿ ಈಗ ಭಗವಂತನನ್ನು ಮರೆತು ಭೋಗದಲ್ಲಿಯೇ ಕಾಲ ಕಳೆಯಬಾರದು. ವಯಸ್ಸಾದಾಗ, ಇಂದ್ರಿಯಗಳು ದುರ್ಬಲಗೊಂಡಾಗ ಭಗವಂತನ ಸ್ಮರಣೆಯು ಸಾಧ್ಯವಾಗುವುದೇ ? ಹೀಗಾಗಿ ಯೌವನದಲ್ಲಿಯೂ ವಾರ್ಧಕ್ಯದಲ್ಲಿಯೂ ದೇವರ ಸ್ಮರಣೆಯಿಲ್ಲದೆ ನಮ್ಮ ಜೀವನವೇ ವ್ಯರ್ಥವಾಗಬಹುದು. ಆದುದರಿಂದ ಕಾಲವನ್ನು ತಳ್ಳದೆ, ವಿಳಂಬ ಮಾಡದೆ, ಬಾಲ್ಯದಿಂದಲೇ ನಾವು ಧಾರ್ಮಿಕ ಸಾಧನೆಯನ್ನು ಮಾಡಬೇಕು. ಶರೀರಸ್ವಾಸ್ಥ್ಯ, ಇಂದ್ರಿಯಗಳ ಪಾಟವವಿರುವಾಗಲೇ ಆಧ್ಯಾತ್ಮಿಕ ಸಾಧನೆಯಲ್ಲಿ ನಾವು ತೊಡಗಬೇಕು.

# ಭ ಜ ನೆ

ದಾಸ ಸಾಹಿತ್ಯಕ್ಕೆ ಭಕ್ತಿ, ಭಾವನೆ, ಪ್ರೀತಿ, ಪ್ರೇಮಗಳ ಅದ್ಭುತ ಶಕ್ತಿಯಿದೆ. ಅದು ಭಗವಂತನ ಸಾಕ್ಷಾತ್ಕಾರವಾದ ಅಪರೋಕ್ಷ ಜ್ಞಾನಿಗಳ ಹೃದಯಾಂತರಾಳದಿಂದ ಹೊರಹೊಮ್ಮಿದ ಪರಮ ಪವಿತ್ರ ಗೀತಾಂಜಲಿ. ಅದಕ್ಕೆ ಜಗತ್ತಿನ ಕಣ್ಣೀರನ್ನು ತೊಡೆಯುವ ಶಕ್ತಿಯಿದೆ. ಮಾನವ ಜನ್ಮ ದೊಡ್ಡದು ಎಂದು ಮಾನವೀಯ ಭಾವನೆಗಳ ಪ್ರಣಾಳಿಕೆಯಾಗಿ ಬಂದ ದಾಸ ಸಾಹಿತ್ಯ ಈಸಬೇಕು ಇದ್ದು ಜೈಸಬೇಕು ಎಂದು ಪ್ರಚಂಡ ಧೈರ್ಯ ಹಾಗೂ ಆತ್ಮಸ್ಥೈರ್ಯವನ್ನು ನೀಡಬಲ್ಲ ಸಾಹಿತ್ಯವಾಗಿದೆ. ದಾಸ ಸಾಹಿತ್ಯವು ಸಾಹಿತ್ಯ, ಸಂಗೀತ, ಸಂಸ್ಕೃತಿಗಳ ತ್ರಿವೇಣೀ ಸಂಗಮವಾಗಿ ಭಜನಾ ಸಂಪ್ರದಾಯವೆಂಬ ಸ್ವರೂಪವನ್ನು ಪಡೆದುಕೊಂಡಿತು.

ಹರಿಭಜನೆ ಮಾಡೋ ನಿರಂತರ ಎಂಬ ದಾಸರ ಮಾತಿನಂತೆ ಭಜನಾ ಸಂಸ್ಕೃತಿ ಭಾರತದ ಭಕ್ತಿ ಸಂಸ್ಕೃತಿಯ ಪ್ರಧಾನ ಭಾಗವಾಗಿ ಕಾವೇರಿಯಂತೆ ಪವಿತ್ರವಾಗಿ ಹಾಗೂ ನಿರಂತರವಾಗಿ ಹರಿದು ಬಂದು ಜನಜೀವನವನ್ನು ಶತಶತಮಾನಗಳಿಂದಲೂ ಧನ್ಯ ಮಾಡಿರುವ ಅದ್ಭುತ ಶಕ್ತಿಯಾಗಿದೆ. ಕನ್ನಡ ಹರಿದಾಸ ಸಾಹಿತ್ಯ ಪ್ರಕಟವಾದದ್ದೇ ಭಜನೆಯ ರೂಪದಿಂದ. ಭಜನಾ ಸಂಪ್ರದಾಯವೇ ದಾಸ ಸಾಹಿತ್ಯವನ್ನು ಸಮೃದ್ಧ ಹಾಗೂ ವ್ಯಾಪಕವಾಗಿ ಮಾಡಲು ಮುಖ್ಯ ಕಾರಣವಾಯಿತು. ಭಕುತಿ ಮುಕುತಿ ದಾತ ನಮ್ಮ ಲಕುಮಿಯರಸ ವಿಜಯವಿಟ್ಠಲ ಶಕುತನೆನುತ ತಿಳಿದು ನಿತ್ಯ ಭಕುತಿಯಿಂದ ನೀವು ಭಜನೆ ಮಾಡಿರೊ ಎಂದು ವಿಜಯದಾಸರು ಹರಿದಾಸರಿಗೆ ಕೊಟ್ಟ ಕರೆ, ನಾಡಿನಲ್ಲೆಡೆ ಭಜನಾ ಸಂಸ್ಕೃತಿಯಾಗಿ ಮಾರ್ದನಿ ನೀಡಿತು.

ಹಲವು ಕರ್ಮವ ಮಾಡಿ ದೇಹವ ಬಳಲಿಸದೆ ದಿನದಿನದಿ ಹೃದಯ ಕಮಲ ಸದನದಿ ವಿರಾಜಿಸುವ ಹರಿಮೂರ್ತಿಯನೆ ಭಜಿಸು ಎಂದು ಸಾಧನೆಯ ಒಳತತ್ವ ತಿಳಿಸುವ ದಾಸ ಸಾಹಿತ್ಯ ಭಜಿಸಿ ಬದುಕೆಲೊ ಮಾನವ ಎಂದು ಮನಸ್ಸಿರುವ ಮನುಷ್ಯರಿಗೆಲ್ಲ ಭಜನೆಯ ಸಂದೇಶವನ್ನು ನೀಡಿದೆ. ಭಜನೆ ಎಂದರೆ ಹರಿಗೀತೆ ಗಾಯನ. ದಾಸ ಸಾಹಿತ್ಯ ಪ್ರವರ್ತಕರಾದ ಶ್ರೀಪಾದರಾಯರೇ ಧ್ಯಾನವು ಕೃತಯುಗದಿ, ಯಜನ ಯಜ್ಞವು ತ್ರೇತಾಯುಗದಿ, ದಾನವಾಂತಕನ ದೇವತಾರ್ಚನೆಯು ದ್ವಾಪರದಿ, ಕಲಿಯುಗದಿ ಗಾಯನದಿ ಕೇಶವ ಎಂದೊಡನೆ ಬಂದು ಕೈಗೂಡುವನು ರಂಗವಿಟ್ಠಲ ಎಂದು ಕಲಿಯುಗದಲ್ಲಿ ಹರಿದಾಸ

ಗಾಯನವಾದ ಭಜನೆ ಹಾಗೂ ದೇವರ ನಾಮಗಳ ಮಹತ್ವವನ್ನು ಮೆರೆದಿದ್ದಾರೆ. ಭಕ್ತಿಯಿಂದ ಹರಿನಾಮ ಸ್ಮರಣೆ ಮಾಡುವ ಈ ಪದ್ಧತಿಗೆ ಫಲಶೃತಿಯನ್ನು ಪುರಂದರದಾಸರು ಕಲಿಯುಗದಲಿ ಹರಿನಾಮವ ನೆನೆದರೆ ಕುಲಕೋಟಿಗಳು–ದ್ಧರಿಸುವುವೋ ರಂಗ ಎಂದು ಸೂಚಿಸಿದ್ದಾರೆ. ಕಲಿಯುಗದಲ್ಲಿ ಭಗವಂತನ ಭಜನೆಯೇ ಸಜ್ಜನರ ಕೈದೀವಿಗೆ.

ಭಕ್ತಿಯಿಂದ ಭಗವಂತನನ್ನು ಕುರಿತು ಹಾಡಿ, ಕುಣಿದು, ಆನಂದಬಾಷ್ಪ ಹರಿಸಿ ತನುವುಬ್ಬಿ, ಪುಳಕ ರೋಮಾಂಚನಗಳಿಂದ ತಾದಾತ್ಮ್ಯಗೊಂಡು, ಕಣ್ಣು ಮುಚ್ಚಿ, ಒಳಗಣ್ಣು ತೆರೆದು ಹೃದಯ ಮಂಟಪದಲ್ಲಿರುವ ಭಗವಂತನ ದರ್ಶನ ಪಡೆಯುವುದೇ ಭಜನೆಯ ಪರಮಗುರಿ. ಭಜನೆ ಭಕ್ತನಿಗೆ ತಾರಕ, ಭಕ್ತಿ ಭಜನೆಗೆ ಪೂರಕ, ಭಕ್ತಿಯಿಂದ ಭಜನೆ ಮಾಡಿದರೆ ಭವಬಂಧನ ನಿವಾರಕ. ಭಕ್ತಿಯೇ ಮುಕ್ತಿಗೆ ದಾರಿ. ಪರಮಾತ್ಮನನ್ನು ಮಾಹಾತ್ಮ್ಯಜ್ಞಾನಪೂರ್ವಕ ಭಜಿಸಿ ಭಕ್ತಿ ಮಾಡಿದರೆ ಪರಮಾತ್ಮನ ಪ್ರಸಾದ ಲಭ್ಯ. ಬಲ್ಲಿದ ದೈವ ರಂಗವಿಟ್ಠಲ ಕೈವಲ್ಯ ಕೊಟ್ಟು ಸಂತೈಸುವನು ಭಜಿಸೊ ಎನ್ನುವ ಶ್ರೀಪಾದರಾಜರು ಭಜನೆ ಮುಕ್ತಿಗೆ ಮಹಾದ್ವಾರವೆನ್ನುತ್ತಾರೆ. ವಾದಿರಾಜರಂತೂ ಭಜನೆಯನ್ನೇ ಭಾಗ್ಯ, ಸೌಭಾಗ್ಯಗಳ ಧನವೆನ್ನುತ್ತಾರೆ. ಪತಿತ ಪಾವನ ಶ್ರೀಹರಿ ಗುರುಗಳನು ಮೋದದಿ ಕ್ಷಿತಿಯೊಳಗೆ ಭಜನೆಯೇ ಧನವೆನ್ನುತ್ತ, ಅತಿಶಯದಿ ಶೇಷಾದ್ರಿ ಹಯವದನನ್ನ ನೆನೆನೆನೆದು ಪ್ರೀತಿಯಿಂದಲಿ ಭಜಿಸುವವನಲ್ಲದೆ, ಭಾಗ್ಯವಂತನು ಇನ್ನು ಯಾರು ? ಎಂದು ಪ್ರಶ್ನಿಸುತ್ತಾರೆ.

ಪುರಂದರದಾಸರು ಭಜನಾ ಪದ್ಧತಿಯನ್ನು ನಿರೂಪಿಸುತ್ತಲೇ ಅದರ ಫಲಶೃತಿಯನ್ನು ಸಾರುತ್ತಾ, ಅದರ ಸಂಸ್ಕೃತಿ ಸಂಪ್ರದಾಯವನ್ನು ಉಗಾಭೋಗ–ವೊಂದರಿಂದ ಪ್ರಸ್ತುತಪಡಿಸುತ್ತಾರೆ. ತಂಬೂರಿ ಮೀಟಿದವ ಭವಾಬ್ಧಿ ದಾಟಿದವ, ತಾಳವ ತಟ್ಟಿದವ ಸುರರೊಳು ಸೇರಿದವ, ಗೆಜ್ಜೆಯ ಕಟ್ಟಿದವ ಖಳರೆದೆಯ ಮೆಟ್ಟಿದವ, ಗಾಯನ ಮಾಡಿದವ ಹರಿಮೂರ್ತಿ ನೋಡಿದವ, ಪುರಂದರವಿಟ್ಠಲನ್ನ ನೋಡಿದವ ವೈಕುಂಠಕ್ಕೆ ಓಡಿದವ. ಭಜನೆ ಮಾಡುವ ವ್ಯಕ್ತಿ ಕೈಯಲ್ಲಿ ತಾಳ ಹಿಡಿದು, ಕಾಲಲ್ಲಿ ಗೆಜ್ಜೆ ಕಟ್ಟಿ, ತಂಬೂರಿ ಮೀಟುತ್ತಾ, ಮೈಮರೆತು ಭಕ್ತಿಪೂರ್ವಕ ಭಜನೆ ಮಾಡಬೇಕೆನ್ನುವ ಸೂಚನೆಯನ್ನು ಈ ಉಗಾಭೋಗದ ಮೂಲಕ ದಾಸರು ನೀಡಿದ್ದಾರೆ. ಆದರೆ ರಾಗತಾಳದ ಜೊತೆಗೆ ಪ್ರೇಮರಸವೂ ಅಷ್ಟೇ ಮುಖ್ಯ. ಅದು ಪರಮಾತ್ಮನ ಪಾದಕಮಲಗಳತ್ತ ಹರಿಯುತ್ತಿರುವ ನಿರಂತರ ಪ್ರೇಮ ಪ್ರವಾಹವಾದರಂತೂ ಇನ್ನೂ ಚೆನ್ನ. ಏಕೆಂದರೆ ಕೇಳನೊ ಹರಿ ತಾಳನೊ, ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ. ಬಾಲಕನ ಕಲಭಾಷೆ ಕೇಳಿ ಜನನಿಯು

ಸುಖ ಪಡುವಂತೆ ಲಕ್ಷ್ಮೀಲೋಲನು ತನ್ನ ಭಕ್ತರು ಮಾಡುವ ಸಂಸ್ತುತಿಗೆ ಹಿಗ್ಗುವನು. ಆ ಸಂಸ್ತುತಿಯೇ ಭಜನೆ.

ಭಜನೆಗೆ ಮುಖ್ಯವಾದದ್ದು ಪ್ರೇಮ. ಭಗವಂತನೆಡೆಗೆ ಹರಿಯುವ ಭಕ್ತನ ಪ್ರೇಮ. ಅದು ಬರಿಯ ಪ್ರೇಮವಲ್ಲ. ಪ್ರೇಮಪ್ರವಾಹ. ಒಮ್ಮೊಮ್ಮೆ ಮಾತ್ರವಲ್ಲ, ನಿರಂತರ ಪ್ರೇಮ ಪ್ರವಾಹ. ಹಾಗಾಗಿ ಭಜನೆ ಮಾಡುವವರಿಗೆ ಮುಖ್ಯವಾಗಿ ದೇಹ ಶುದ್ಧಿಯಿರಬೇಕು. ನಿರ್ಮಲವಾದ ಮನಸ್ಸಿರಬೇಕು. ಉತ್ತಮ ಚಿಂತನೆಗಳಿರಬೇಕು. ಸಾತ್ವಿಕ ಪರಿಸರವಿರಬೇಕು. ಸಜ್ಜನರ ಸಂಗವಿರಬೇಕು. ಭಗವಂತನಿಗೆ ನಿವೇದನೆಯಾದ ಸಾತ್ವಿಕ ಆಹಾರ ಸೇವನೆಯಾಗಬೇಕು. ಶಾಂತವೇಳೆಯಿರಬೇಕು. ಕಳೆಮುಖವಿರಬೇಕು. ಆತಂಕ, ಗೊಂದಲ ಇರಬಾರದು. ಶುದ್ಧಮನಸ್ಸು, ಸದ್ಭಾವನೆಯಿಂದ ಭಜನಾ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು. ತುಳಸೀಮಾಲೆ, ಗೋಪಿಚಂದನ, ಸಂಜೆ ಭಜನೆ ಆದಲ್ಲಿ ಗಂಧ, ಅಕ್ಷತೆ, ಅಂಗಾರಗಳನ್ನು ಧರಿಸಿರಬೇಕು. ತಾಳ, ಗೆಜ್ಜೆ, ತಂಬೂರಿ, ಚಿಟಿಕೆಗಳನ್ನು ಹಿಡಿದಿರಬೇಕು.  ಪರಂಪರೆಯಲ್ಲಿ ಬಂದು ಹರಿವಾಯುಗಳ ಅನುಗ್ರಹಕ್ಕೆ ಪಾತ್ರವಾದ, ಸಂಪ್ರದಾಯಬದ್ಧ ಹಾಡುಗಳನ್ನು ಹೇಳಬೇಕು.

ಸಾಮೂಹಿಕವಾಗಿ ಭಜನೆಗೆ ಕುಳಿತುಕೊಳ್ಳುವ ಭಜನಾ ಮಂಡಳಿಯ ಸಭ್ಯರು ಭಜನೆ ಮಾಡುವ ಜಾಗದಲ್ಲಿ ದೇವತಾ ಸನ್ನಿಧಾನದ ಹಿನ್ನಲೆಯನ್ನು ನಿರ್ಮಿಸಬೇಕು.  ಭಜನೆ ಮಾಡುವಾಗ ಶಾಸ್ತ್ರೀಯ ಸಂಗೀತ ಜ್ಞಾನಕ್ಕಿಂತ ಸಂಪ್ರದಾಯ ಶೋಭೆ ಮುಖ್ಯ.  ಪರಂಪರೆಯಿಂದ ಬಂದ ಸಾಂಪ್ರದಾಯಿಕ ಮಟ್ಟುಗಳಲ್ಲೇ ಭಜನೆಯ ಹಾಡುಗಳನ್ನು ಹೇಳಬೇಕು. ಅನಗತ್ಯವಾಗಿ ಹೊಸ ರಾಗಗಳನ್ನು ಹಾಕಬಾರದು. ಮಹಿಳೆಯರು ಭಜನೆ ಮಾಡುವಾಗ ಕಚ್ಚೆ ಹಾಕಿಕೊಳ್ಳುವುದು ಉತ್ತಮಪಕ್ಷ. ಗಂಡಸರು ತಲೆಗೆ ಹರಿದಾಸ ಸಂಪ್ರದಾಯದ ಕಾವಿವಸ್ತ್ರಗಳನ್ನು ಸುತ್ತಿಕೊಳ್ಳಬೇಕು. ಒಮ್ಮೆ ಭಜನೆಗೆ ಕುಳಿತರೆ ಸಂಪೂರ್ಣವಾಗಿ ಗಮನ ಹಾಡುಗಳಲ್ಲಿ ಹರಿಯುವ ಭಗವತ್ ಚಿಂತನೆಯತ್ತ ಇರಬೇಕು. ಲೋಕೈಕನಾಥನ ವಾರ್ತೆಯಲ್ಲದೆ ಲೋಕವಾರ್ತೆಗೆ  ಅವಕಾಶ ಕೂಡದು. ಬೆಳಗಿನ ಹೊತ್ತು ಭಜನೆಯಾದರೆ ಸೃಷ್ಟಿಕ್ರಮ ಚಿಂತನೆ ಮಾಡಿ, ಉದಯರಾಗದ ಹಾಡುಗಳಿಂದ ಪ್ರಾರಂಭಿಸಿ ಭಗವಂತನನ್ನು ಕ್ರಮ ಪ್ರಕಾರ ಸ್ತುತಿಸಿ ನಂತರ ದೇವತೆಗಳನ್ನು, ಯತಿಗಳನ್ನು ಹಾಗೂ ಹರಿದಾಸರುಗಳನ್ನು ಸ್ತುತಿಸಬೇಕು. ಇಲ್ಲಿಯ ಅವರೋಹಣ ಕ್ರಮದಲ್ಲಿ ದೇವತಾ ತಾರತಮ್ಯವನ್ನು, ಯತಿಗಳ ಹಾಗೂ ಹರಿದಾಸರ ಕಾಲಮಾನವನ್ನು ಅನುಸರಿಸಬೇಕು. ಬೆಳಗಿನ ಭಜನೆಯಾದ ನಂತರ ಭಗವಂತನಿಗೆ ಮಂಗಳಾರತಿ ಮಾಡಬೇಕು. ಸಾಯಂಕಾಲ ಅಥವಾ ರಾತ್ರಿಯ ಭಜನೆಯಾದಲ್ಲಿ ಆರೋಹಣ ಕ್ರಮದಲ್ಲಿ ಭಜನೆ ಮಾಡಬೇಕು.

ಇಲ್ಲಿ ಲಯ ಚಿಂತನೆಯ ಅನುಸಂಧಾನವಿರಬೇಕು. ಮೊದಲು ಹರಿದಾಸರನ್ನು, ಯತಿಗಳನ್ನು ಕಾಲಮಾನದಂತೆ ಸ್ತುತಿಸಿ ನಂತರ ತಾರತಮ್ಯೋಕ್ತ ದೇವತೆಗಳನ್ನು ಸ್ತುತಿಸಿ ನಂತರ ಲಕ್ಷ್ಮೀದೇವಿ ಹಾಗೂ ಕಡೆಯಲ್ಲಿ ಭಗವಂತನನ್ನು ಕುರಿತ ಹಾಡುಗಳನ್ನು ಹೇಳಬೇಕು.

ಸಂಜೆ, ರಾತ್ರಿಯ ಭಜನಾ ಕಾರ್ಯಕ್ರಮಗಳಲ್ಲಿ ಆರತಿ ಹಾಡುಗಳು, ಧೂಪಾರ್ತಿ ಹಾಡುಗಳು, ನರ್ತನಸೇವಾ, ಹರಿವಾಣಸೇವಾ, ಮಂಗಳಾರತಿ ಹಾಡುಗಳನ್ನು ಹಾಡಬೇಕು.

ಲಾಲಿ ಸೇವೆಯ ಹಾಡುಗಳನ್ನು, ಜೋಗುಳದ ಹಾಡುಗಳನ್ನು ಹಾಡಿ ಕಡೆಯಲ್ಲಿ ಸರ್ವಕರ್ಮ ಸಮರ್ಪಣ ಮಾಡಬೇಕು.

**ಏಕಾದಶಿಯ ದಿನ ಜೋಗುಳದ ಹಾಡನ್ನು ಹೇಳುವ ಸಂಪ್ರದಾಯವಿಲ್ಲ.**

ಸಾಧಾರಣವಾಗಿ ಭಜನೆಗೆ ಕುಳಿತಾಗ ಮೊದಲಿಗೆ ಧ್ಯಾನಶ್ಲೋಕಗಳನ್ನು ಹೇಳಿಕೊಂಡು ನಂತರ ಆದಿಮಂಗಳವೆನಿಸಿದ ಪುರಂದರದಾಸರ ಸತತ ಗಣನಾಥ ಸಿದ್ಧಿಯನೀವ ತಾರತಮ್ಯ ಪದವನ್ನು ಹೇಳಬೇಕು. ಆಮೇಲೆ ಎಲ್ಲಿ ಹರಿಕಥಾ ಪ್ರಸಂಗವೊ ಉಗಾಭೋಗ ಹೇಳಿ ಪ್ರಸಂಗ ಹಾಗೂ ಪರಿಸರ ಪಾವಿತ್ರ್ಯವುಂಟು ಮಾಡಬೇಕು. ಭಜಕ ಜನರಿಗೆ ನಿಶ್ಚಯವಾಗಿರುವ ಜಯ ಜಯ ಹರಿ ಎಂಬುವುದೇ ಸುದಿನವು ಹೇಳಿ ತತ್ವಾರ್ಥಸಾರವಾದ ಸತ್ಯ ಜಗಕಿದು ಪಂಚಭೇದವು ಹೇಳಬೇಕು. ತಕ್ಷಣವೇ ಗುರುಸ್ಮರಣೆ ಮಾಡಬೇಕು.

ಸಾಧಾರಣವಾಗಿ ಭಜನೆಗೆ ಸಾಮೂಹಿಕವಾಗಿ ವ್ಯವಸ್ಥೆ ಮಾಡಿದಾಗ ಪರಿಸರ ಶುದ್ಧಿ, ಸ್ಥಳಶುದ್ಧಿ ತುಂಬಾ ಮುಖ್ಯವಾಗುತ್ತದೆ. ಭಜನೆಗಾಗಿಯೇ ನಿಗದಿತ ಸ್ಥಳವಿದ್ದಲ್ಲಿ ಆ ಸ್ಥಳವನ್ನು ಗೋಮಯದಿಂದ ಸಾರಣೆಮಾಡಿ ರಂಗವಲ್ಲಿಯನ್ನಿಟ್ಟು, ದೇವತಾ ಪ್ರತಿಮೆಗಳೊ, ಚಿತ್ರಪಟಗಳೋ ಇದ್ದಲ್ಲಿ, ಯತಿಗಳು, ಹರಿದಾಸರ ಚಿತ್ರಪಟಗಳಿದ್ದಲ್ಲಿ ತಾರತಮ್ಯ ರೀತಿಯಲ್ಲಿ ಅವರೋಹಣ ಕ್ರಮದಲ್ಲಿ ಪೀಠದಲ್ಲಿ ಅಲಂಕರಿಸಬೇಕು. ಮುಖ್ಯಭಾಗದಲ್ಲಿ ದೇವರ ಪೆಟ್ಟಿಗೆ ಅಥವಾ ಸಾಲಿಗ್ರಾಮದ ಸಂಪುಟವನ್ನಿಟ್ಟು ಸನ್ನಿಧಾನಪ್ರಾಪ್ತಿ ಮಾಡಬೇಕು. ಸನಿಹದಲ್ಲೇ ಪೂಜಾ ಸಾಮಗ್ರಿಗಳನ್ನು ಇರಿಸಿಕೊಳ್ಳಬೇಕು. ಪ್ರಾಣದೇವರ ಘಂಟೆ, ಕಲಶಪಾತ್ರೆ, ಮಂಗಳಾರತಿ ಮಾಡುವ

ಹಲಗಾರತಿ ಹಾಗೂ ದೀಪಾರತಿ ತಟ್ಟೆಗಳು, ಅರಿಶಿನ ಕುಂಕುಮ, ಹೂವು ಮುಂತಾದ ಮಂಗಳದ್ರವ್ಯಗಳನ್ನು ಇರಿಸಿಕೊಳ್ಳಬೇಕು.

ಭಜನೆ ಪ್ರಾರಂಭ ಮಾಡುವ ಮೊದಲು ಸತ್ಯಸಂಕಲ್ಪನಾದ ಭಗವಂತನನ್ನು ಸ್ಮರಿಸಿ, ಮನಸಾ ನಮಿಸಿ, ಸಂಕಲ್ಪಮಾಡಿ ಒಂದು ಮಂಗಳಾರತಿ ಮಾಡಿ ಪ್ರಾರಂಭಿಸಬೇಕು. ದಾಸಕಕ್ಷ್ಯೆಯಾದೊಡನೆಯೇ ಒಂದು ಮಂಗಳಾರತಿ, ಯತಿಕಕ್ಷ್ಯೆ ಮುಗಿದೊಡನೆಯೇ ಒಂದು ಮಂಗಳಾರತಿ, ದೇವತಾಕಕ್ಷ್ಯೆ ಮುಗಿಯುತ್ತಿದ್ದಂತೆಯೇ ಇನ್ನೊಂದು ಮಂಗಳಾರತಿ ಮಾಡಬೇಕು. ದೇವರನ್ನು ಕರೆಯುವಾಗ ಎರಡು ದೇವರ ದೀಪಗಳನ್ನೂ, ನೀಲಾಂಜನಗಳನ್ನೂ ಹಚ್ಚಿ ಒಂದು ಮಂಗಳಾರತಿ ಮಾಡಿ ದೇವರನ್ನು ಕರೆಯಬೇಕು. ಒಂದು ದೇವರ ನಾಮವನ್ನು ಪ್ರಾರಂಭಿಸಿದ ಮೇಲೆ ಅದನ್ನು ಪೂರೈಸುವವರೆಗೂ ಮತ್ತೊಂದನ್ನು ಪ್ರಾರಂಭಿಸಬಾರದು. ಒಂದು ಪದವನ್ನು ಪ್ರಾರಂಭಿಸಿ ಪೂರೈಸದೆ ಬೇರೊಂದನ್ನು ಪ್ರಾರಂಭಿಸಿದರೆ, ವರ್ಣಾಭಿಮಾನಿಗಳು ನೊಂದುಕೊಳ್ಳುವರು ಎಂದು ಶ್ರೀವಿಜಯರಾಯರ ನುಡಿ. ತಾರತಮ್ಯಕ್ಕೆ ಭಂಗ ಬರದಂತೆ ಪದಗಳನ್ನು ಹೇಳಬೇಕು. ಏಕಾದಶಿಯ ದಿನ ಬಿಟ್ಟು ಉಳಿದ ದಿನಗಳಲ್ಲಿ ನೈವೇದ್ಯ ಸಮರ್ಪಣೆ ಮಾಡಬೇಕು.

ಒಟ್ಟು ಭಜನಾ ಸಂಪ್ರದಾಯದ ಜನರು ಕಲಿಯಬೇಕಾದ ಹಾಡು, ದೇವರ ನಾಮಗಳೆಂದರೆ ದೇವತಾ ತಾರತಮ್ಯದ್ದು, ಹರಿಭಕ್ತರ ಮಹಿಮಾಯುಕ್ತ ಶ್ರೀಹರಿಯ ಸ್ತೋತ್ರದ ಉಗಾಭೋಗಗಳು, ಹರಿಸ್ತೋತ್ರ ಸುಳಾದಿಗಳು, ದೇವರು ಎಂತಹ ಕರುಣಾಸಮುದ್ರ ಎಂಬುದನ್ನು ನಿರೂಪಿಸುವ ಸ್ತೋತ್ರಪದಗಳು, ದೇವರನ್ನು ಬಾರೋ, ಬಾಪ್ಪ, ಬಾರಯ್ಯ ಎಂದು ಕರೆಯುವ ಆಹ್ವಾನಪರ ಹಾಡುಗಳು, ದೇವರು ಇನ್ನೂ ಬರಲಿಲ್ಲವಲ್ಲ, ಮೊರೆ ಕೇಳಲಿಲ್ಲವಲ್ಲ ಎಂದು ಕಾತರಿಸುವ ಹಾಡುಗಳು, ದೇವರು ಬಂದ ಸಂಭ್ರಮ ಪದಗಳು, ಬಂದು ನಿಂದು ಸನ್ನಿಧಾನ ತಂದ ಪದಗಳು, ರಮಾಸಹಿತ ಕುಳಿತನೆಂಬ ಪದಗಳು, ದೇವರಿಗೆ ಪಾದ್ಯ, ಅರ್ಘ್ಯ, ಆಚಮನ, ಸ್ನಾನ, ಪುನರಾಚಮನ, ವಸ್ತ್ರ, ಗಂಧ, ಅಕ್ಷತಾ, ಕುಸುಮ, ತುಲಸಿ, ವನಮಾಲಾ, ಆಭರಣ, ಅಲಂಕಾರ, ಶ್ರೀಲಕ್ಷ್ಮೀಸಮೇತನಾದ ಶ್ರೀಹರಿಗೆ ಅರ್ಪಿಸುವ ಪದಗಳು, ಶ್ರೀರಮಾ ನಾರಾಯಣರ ಕ್ರೀಡಾಮಹಿಮೆಯ ಸ್ತೋತ್ರಪದಗಳು, ಭಕ್ತರ ಆರ್ತತೆ, ಭಗವಂತನ ದೀನವತ್ಸಲತೆಯನ್ನು ನಿರೂಪಿಸುವ ಹಾಡುಗಳು, ದೇವರನ್ನು ರಮಾಸಹಿತ ಏಕಾಂತಸೇವೆಗೆ ಕರೆವ ಪದಗಳು, ರಮಾನಾರಾಯಣರಿಗೆ ಉರುಟಣೆ ಪದಗಳು, ಶೋಭನ ಪದಗಳು, ಗುರು ಪರಂಪರೆಯ, ಹರಿದಾಸಪರಂಪರೆಯ ಸ್ತುತಿ ಕೃತಿಗಳು, ದೇವರಿಗೆ ಲಕ್ಷ್ಮೀದೇವಿಗೆ, ಪ್ರಾಣಾದಿ ತಾತ್ವಿಕದೇವತಾಗಣಕ್ಕೆ, ಗುರುಗಳಿಗೆ ಫಲಾಹಾರಾದಿ

ಉಪಚಾರ ಪದಗಳು, ದೇವರ, ರಮಾದೇವಿಯ, ಪ್ರಾಣದೇವರ, ಗುರುಗಳ ಮಂಗಳಾರತಿ ಪದಗಳು, ತೊಟ್ಟಿಲಸೇವಾ, ಡೋಲೋತ್ಸವ, ಲಾಲಿ ಪದಗಳು, ನರ್ತನ ಪದಗಳು, ಹರಿಭಕ್ತರ ಸ್ತೋತ್ರಪದಗಳು, ಏಕಾದಶಿಯ ಹರಿವಾಣ ಸೇವಾಪದಗಳು, ಸರ್ವಸಮರ್ಪಣಪೂರ್ವಕ ಉಗಾಭೋಗಗಳು.

ಭಜನೆಯನ್ನು ಭಕ್ತಿಯಿಂದ ಮಾಡಿ, ಬಿಗಿದ ಕಂಠದಿಂದ ಆನಂದ ಬಾಷ್ಪದಿಂದ, ನಗುಮುಖದಿಂದ, ರೋಮಾಂಚನ ಪದಗಳಿಂದ, ಸಂತೋಷ ಸಂಭ್ರಮಗಳಿಂದ, ಭಗವಂತನ ಗುಣಗಳನ್ನು ಪೊಗಳಿ ಹಿಗ್ಗುವುದೇ ಫಲವಿದು ಬಾಳ್ದುದಕೆ. ಭಜನೆ ಸಾತ್ವಿಕ ಸಂಸ್ಕೃತಿಯ ಸಂಕೇತ. ಉತ್ತಮ ಕೌಟುಂಬಿಕ – ಸಾಮಾಜಿಕ ವಾತಾವರಣವನ್ನು ನಿರ್ಮಿಸುವಲ್ಲಿ ಭಜನಾ ಸಂಪ್ರದಾಯದ ಪಾತ್ರ ಮಹತ್ವದ್ದು. ಜನಸಾಮಾನ್ಯರನ್ನು ಉನ್ನತ ಧ್ಯೇಯದತ್ತ, ಸಾರ್ಥಕ ಜೀವನದತ್ತ, ದೈವೀಭಾವನೆಗಳತ್ತ ಉದ್ದೀಪಿಸುವ ಸಾಧನ ಭಜನ ಸಂಸ್ಕೃತಿ.

ಭಜಕ ಜನರು ಎಲ್ಲಿ ಗಾನ ಮಾಡುತ್ತಾರೋ ಅಲ್ಲಿ ಭಗವಂತ ವಿಶೇಷ ಸನ್ನಿಧಾನದಿಂದ ಬಂದಿರುತ್ತಾನೆ.

## ಶ್ರೀಮಧ್ವಮತಪ್ರಮೇಯನವರತ್ನಮಾಲಿಕಾ



ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ ತತ್ವತೋ ।
ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂ ಗತಾಃ ॥
ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥

ಶ್ರೀಮನ್ಮಧ್ವಸಿದ್ಧಾಂತದಲ್ಲಿ – (೧) ಶ್ರೀಹರಿಯೇ ಸರ್ವೋತ್ತಮನು (೨) ಪ್ರಮಾಣ ಪ್ರಮಿತವಾದ ಈ ಜಗತ್ತು ಪಾರಮಾರ್ಥತಃ ಸತ್ಯವು (೩) ಜೀವೇಶ್ವರ ಭೇದ, ಜಡೇಶ್ವರ ಭೇದ, ಜೀವ–ಜಡಭೇದ, ಜೀವ–ಜೀವಭೇದ, ಜಡ–ಜಡ ಭೇದಗಳೆಂಬ ಭೇದಪಂಚಕವು ಪಾರಮಾರ್ಥಿಕವು (೪) ಸಾತ್ವಿಕ, ರಾಜಸ, ತಾಮಸರೆಂಬ ತ್ರಿವಿಧ ಜೀವರುಗಳು ಯಾವಾಗ್ಯೂ ಶ್ರೀಹರಿಯ ಅಧೀನರು (೫) ಸ್ವಭಾವತಃ ತಾರತಮ್ಯದಲ್ಲಿ ಇರುವವರು (೬) ಸ್ವರೂಪಭೂತಾನಂದಾನುಭವವೇ ಸಾತ್ವಿಕರಿಗೆ ಮುಕ್ತಿಯು (೭) ಪರಮ ನಿರ್ಮಲ ವಿಷ್ಣು ಭಕ್ತಿಯೇ ಆ ಮುಕ್ತಿಯ ಸಾಧನವು (೮) ಪ್ರತ್ಯಕ್ಷ, ಅನುಮಾನ, ಆಗಮಗಳೆಂದು ಪ್ರಮಾಣಗಳು ಮೂರೇ (೯) ಶ್ರೀಹರಿಯೇ ಅಖಿಲ ಸದಾಗಮಗಳಿಂದ ಪರಮ ತಾತ್ಪರ್ಯಪೂರ್ವಕ ಮುಖ್ಯ ಪ್ರತಿಪಾದ್ಯನು, ಎಂದು ಈ ಪ್ರಮೇಯ ನವರತ್ನಗಳು ಪ್ರಕಾಶಿಸುತ್ತವೆ.

**ಮ ಧ್ವ ಮತವೇ ಮತವು ಸಕಲ ಶೃತಿ ಸಮ್ಮತವು**

www.vijayadasaru.net



## ಭ ಗ ವ ದ್ಭ ಕ್ತ ರಿ ಗೆ ಸು ಸಂ ಧಿ

**ತ್ವರೆ ಮಾಡಿರಿ । ೧೦೦% ಆಕರ್ಷಕಬಡ್ಡಿ ತ್ವರೆಮಾಡಿರಿ**

## ಶ್ರೀಮನ್ಮಧ್ವಸಿದ್ಧಾಂತ ಜೀವವಿಮೆ ಯೋಜನೆ

| | | |
|---|---|---|
| ಅಧ್ಯಕ್ಷರು | : | ಶ್ರೀ ಪದ್ಮನಾಭ ಪರಮಾತ್ಮ |
| ಉಪಾಧ್ಯಕ್ಷರು | : | ಶ್ರೀ ರಮಾದೇವಿಯರು |
| ಸಂಘಟನಕಾರರು | : | ಶ್ರೀ ಬ್ರಹ್ಮದೇವರು / ಶ್ರೀ ವಾಯುದೇವರು |
| ಕಾರ್ಯದರ್ಶಿಗಳು | : | ಶ್ರೀ ಸರಸ್ವತಿ / ಶ್ರೀ ಭಾರತೀದೇವಿಯರು |
| ಕಾರ್ಯನಿರ್ವಾಹಕರು | : | ತತ್ವಾಭಿಮಾನಿ, ಇಂದ್ರಿಯಾಭಿಮಾನಿ ದೇವತೆಗಳು |
| ನಿರ್ದೇಶಕರು | : | ಮಾಧ್ವಮಠೀಯ ಗುರುಪರಂಪರೆ |
| ಪ್ರಚಾರಕರು | : | ದಾಸಚತುಷ್ಟಯ ಮತ್ತು ಅವರ ಶಿಷ್ಯ, ಪ್ರಶಿಷ್ಯರು |
| ಏಜೆಂಟರುಗಳು | : | ಪ್ರವಚನಕಾರರು ಮತ್ತು ಕೀರ್ತನಕಾರರು |
| ಮುಖ್ಯ ಕಾರ್ಯಾಲಯಗಳು | : | ತಿರುಪತಿ, ಉಡುಪಿ, ಪಂಢರಪುರ |
| ಶಾಖಾ ಕಾರ್ಯಾಲಯಗಳು | : | ಸಕಲ ಪುಣ್ಯಕ್ಷೇತ್ರಗಳು ಮತ್ತು ಸ್ವಸ್ಥಳ |

## ಠೇ ವ ಣಿ ಗ ಳ ವಿ ವ ರ

೧. ನಿತ್ಯ ಠೇವಣಿ : ಸಂಧ್ಯಾವಂದನೆ (ಉತ್ತಮ : ಮೂರು ಹೊತ್ತು, ಮಧ್ಯಮ : ಎರಡುಹೊತ್ತು, ಅಧಮ : ಒಂದು ಹೊತ್ತು) ದೇವತಾಪೂಜ, ಅತಿಥಿ ಸತ್ಕಾರ, ಸದ್ವೃತ್ತಿಯಲ್ಲಿ ದ್ರವ್ಯಾರ್ಜನೆಯಿಂದ ಪರಿವಾರ ಪೋಷಣೆ, ಭಾಗವತಾದಿ ಧರ್ಮಗ್ರಂಥಗಳ ಪಠಣ, ಶ್ರವಣ ಮತ್ತು ಮನನ. ಸದಾಚರಣೆ.

೨. ಸಾವಧಿ ಠೇವಣಿ : ಯಥಾಶಕ್ತಿ ದಾನಧರ್ಮಗಳೊಂದಿಗೆ ಆಯಾ ಮಾಸಗಳಲ್ಲಿ ಬರುವ ವ್ರತ, ನೇಮಾದಿಗಳ ಆಡಂಬರರಹಿತ ಆಚರಣೆ. ಪರೋಪಕಾರ.

೩. **ಕಡ್ಡಾಯ ಠೇವಣಿ** : **ಏ ಕಾ ದ ಶಿ ವ್ರ ತಾ ಚ ರ ಣೆ**

ಈ ಯೋಜನೆಯಲ್ಲಿ ಇದುವರೆಗೆ ನೀವು ಠೇವಣಿದಾರರಾಗಿಲ್ಲದಿದ್ದರೆ ಕೂಡಲೇ ಎಲ್ಲಾ ಠೇವಣಿಗಳನ್ನು ಅಥವಾ ನಿಮಗೆ ಅನುಕೂಲವಾದ ಯಾವುದೇ ಒಂದು ಠೇವಣಿಯನ್ನು ಪ್ರಾರಂಭಿಸಿರಿ. ಪ್ರತಿಯೊಬ್ಬ ಠೇವಣಿದಾರರಿಗೆ ಅವರವರ ಠೇವಣಿ ಮೊತ್ತಕ್ಕೆ ಅನುಗುಣವಾಗಿ ಪೂರ್ಣ ಮೊತ್ತವನ್ನು ೧೦೦% ವಾರ್ಷಿಕ ಬಡ್ಡಿಸಹಿತ ಆಜೀವಪರ್ಯಂತ ಸಾಖ್ಯ ರೂಪದಲ್ಲಿ ಮರುಪಾವತಿ ಮಾಡಿ ಅನಂತರ ವೈಕುಂಠ, ಶ್ವೇತದ್ವೀಪ, ಅನಂತಾಸನಗಳಲ್ಲಿ ಶಾಶ್ವತ ಸುಖವನ್ನೊದಗಿಸುವ ಏರ್ಪಾಟು ಮಾಡಲಾಗುವುದು. ಯುಗಧರ್ಮಾನುಸಾರವಾಗಿ ಈ ಯೋಜನೆಯು ಕಲಿಯುಗದ ಸಮಾಪ್ತಿಯವರೆಗೆ ಮಾತ್ರ ಜಾರಿಯಲ್ಲಿರುತ್ತದೆ.

## ನ ವ ವಿ ಧ ದ್ವೇ ಷ

೧. ಜೀವ – ಪರಮಾತ್ಮರಿಗೆ ಐಕ್ಯವಿದೆ ಎಂದು ಹೇಳುವುದು ೨. ಶ್ರೀಹರಿ ನಿರ್ಗುಣ ಎಂದು ಹೇಳುವುದು ಅಥವಾ ೩. ಶ್ರೀಹರಿಯಲ್ಲಿ ಕೆಲವೇ ಗುಣಗಳಿವೆ ಎಂದು ಕಲ್ಪಿಸುವುದು ೪. ಇತರರು ಶ್ರೀಹರಿಗೆ ಸಮರು ಎಂದು ಭಾವಿಸುವುದು ೫. ಇತರರು ಶ್ರೀಹರಿಗೆ ಅಧಿಕರು ಎಂದು ಊಹಿಸುವುದು ೬. ಶ್ರೀಹರಿಯ ಅವತಾರ ಹಾಗೂ ಗುಣಗಳಲ್ಲಿ ಭೇದವೆಣಿಸುವುದು ೭. ಶ್ರೀಹರಿಯ ಅವತಾರಗಳಲ್ಲಿ ಜನನ ಮರಣಾದಿಗಳನ್ನು ಕಲ್ಪಿಸುವುದು ೮. ಹರಿಭಕ್ತರನ್ನು ದ್ವೇಷಿಸುವುದು ಹಾಗೂ ೯. ವೇದಾದಿ ಪ್ರಮಾಣಗಳನ್ನು ಅಲ್ಲಗಳೆಯುವುದು

ಈ ನವವಿಧ ದ್ವೇಷಗಳಿಂದ ಸಂಪೂರ್ಣಮುಕ್ತವಾದುದೇ ನಿರ್ಮಲಭಕ್ತಿ

## ನ ವ ವಿ ಧ ಭ ಕ್ತಿ

**೧. ಶ್ರ ವ ಣ ೨. ಕೀ ರ್ತ ನ ೩. ಸ್ಮ ರ ಣ ೪. ಪಾ ದ ಸೇ ವ ನ ೫. ಅ ರ್ಚ ನ ೬. ವ ಂ ದ ನ ೭. ದಾ ಸ್ಯ ೮. ಸ ಖ್ಯ ೯. ಆ ತ್ಮ ನಿ ವೇ ದ ನ**

ಆಪಾದಮೌಲಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್
ತೇನ ವಿಘ್ನಾಃ ಪ್ರಣಶ್ಯಂತಿ ಸಿದ್ಧ್ಯಂತಿ ಚ ಮನೋರಥಾಃ ॥

ಆಪಾದಮೌಲಿಪರ್ಯಂತವಾಗಿ ಗುರುಗಳ ಆಕೃತಿಯನ್ನು (ಆಕಾರವನ್ನು) ಮತ್ತು ಮಂಗಳಾಚರಣ ಶ್ಲೋಕದಿಂದ ಪ್ರಾರಂಭಿಸಿ, ಸಮಾಪನ ಶ್ಲೋಕದವರೆಗೆ, ಶ್ರೀಗುರುಗಳ ದೇವತೆಗಳ ಗ್ರಂಥವನ್ನು ಸ್ಮರಣೆ ಮಾಡಬೇಕು. ಹಾಗೆ ಸ್ಮರಿಸುವುದರಿಂದ, ನಮಗೆ ಬಂದ ವಿಘ್ನಗಳೆಲ್ಲವೂ ನಾಶಹೊಂದುವುವು ಮತ್ತು ನಮ್ಮ ಮನೋರಥಗಳು ಸಿದ್ಧಿಸುವುವು.

**ನಂಬಬೇಡ: ಜಿಜ್ಞಾಸಿಸು – ಆಚಾರ್ಯ ಮಧ್ವ**

**ಮಂತ್ರ ಶಬ್ದಾರ್ಥ :** ಮಹಾನುಭಾವರಿಂದ ದೃಷ್ಟವಾಗಿ ಮಹಾಫಲಪ್ರದವಾದ ವರ್ಣಸಮೂಹಕ್ಕೆ ಮಂತ್ರವೆಂದು ಹೆಸರು.


ಪುಸ್ತಕೇ ಲಿಖಿತಾನ್ ಮಂತ್ರಾನ್ ಆಲೋಕ್ಯ ಪ್ರಜಪಂತಿ ಯೇ ।
ಬ್ರಹ್ಮಹತ್ಯಾ ಸಮಂ ತೇಷಾಂ ಪಾತಕಂ ಪರಿಕೀರ್ತಿತಮ್ ।

ಪುಸ್ತಕದಲ್ಲಿ ಬರೆದ ಮಂತ್ರಗಳನ್ನು ಓದಿ ಜಪಿಸಿದವರಿಗೆ ಬ್ರಹ್ಮಹತ್ಯೆಗೆ ಸಮನಾದ ಪಾಪ. ಗುರೂಪದೇಶವಿಲ್ಲದೆ ಮಂತ್ರಗಳನ್ನು ಜಪಿಸಬಾರದು.

ಭಗವಂತನ ಪ್ರೀತಿಯನ್ನು ಮಾತ್ರ ಉದ್ದೇಶಿಸಿ ಮಾಡುವ ಸ್ವವಿಹಿತ ಕರ್ಮಾನುಷ್ಠಾನಕ್ಕೆ 'ಪೂಜೆ' ಎಂದು ಹೆಸರು.

www.vijayadasaru.net

# ಗು ರು ಪ್ರ ಸಾ ದೋ ಬ ಲ ವಾ ನ್



# ಶ್ರೀಗುರುಗಳ ಪ್ರಸಾದವು ಅನುಗ್ರಹವು ಬಲವತ್ತರವಾದುದು

ಗುರುಭಕುತಿ, ಶ್ರೀಹರಿಯ ಅಪರೋಕ್ಷದರ್ಶನಕ್ಕೆ ಅವಶ್ಯವಾದ ಸಾಧನೆಗಳಲ್ಲಿ ಪ್ರಧಾನವಾದುದು. ಗುರುಸೇವೆಯಿಂದ ಘೋರವಾದ ಪಾಪ ಕರ್ಮಗಳು ನಾಶವಾಗುತ್ತವೆ. ಸೇವೆಯಿಂದ ಸಂತುಷ್ಟರಾದ ಗುರುಗಳು ಮಾಡುವ ಉಪದೇಶವೇ ಜ್ಞಾನಕ್ಕೆ ಸಾಧನ. ಗುರುಪ್ರಸನ್ನತೆಯು, ಲಿಂಗದೇಹಭಂಗಕ್ಕೆ ಕಾರಣವಾಗುವ ಶ್ರೇಷ್ಠಭಕ್ತಿಯನ್ನು ಮುಕುಂದನಲ್ಲಿ ದೊರಕಿಸುತ್ತದೆ. ಗುರುಗಳು ಪರಮಾನುಗ್ರಹ ಮಾಡಿದರೆ, ನಿತ್ಯವೂ ಪರತತ್ವ, ಅಪರತತ್ವ ಸಂಬಂಧಿಯಾದ ಪ್ರಮೇಯಗಳು ಕರಗತವಾಗುವುವು. ಸ್ವರೂಪಯೋಗ್ಯತೆ ಇದ್ದಷ್ಟು ಗುರುಭಕುತಿ ಮಾಡಿ ಸಂಪಾದಿಸಿದ ಗುರುಗಳ ಬಲ ಒಂದಿದ್ದರೇ ಸಾಕು, ಇಡೀ ಜಗತ್ತನ್ನು ಗೆಲ್ಲಬಹುದು.

ಗುರುಗಳ ಕರುಣೆ ಪಡೆದವನೇ ಧನ್ಯ. ಗುರುಗಳ ಧ್ಯಾನಮಾಡುತ್ತಾ ಗುರುಗಳ ಚರಣಾಬ್ಜಗಳಲ್ಲಿ ಭೃಂಗನಂತೆ ಮನಸ್ಸನ್ನು ನಿಲ್ಲಿಸಿಕೊಳ್ಳಬೇಕು. ಗುರುಗಳ ಪ್ರಸಾದದಿಂದಲೇ ಸರ್ವವಿದ್ಯೆಗಳ ಪ್ರಾಪ್ತಿ. ಇಹಪರಗಳಲ್ಲಿ ಯೋಗಕ್ಷೇಮ ವಹಿಸುವಲ್ಲಿ ಗುರುಗಳಿಗೆ ಸಮರಿಲ್ಲ. ಆದ್ದರಿಂದಲೇ ಗುರುಮಂತ್ರವನ್ನು ಉಚ್ಚರಿಸುತ್ತಾ ಗುರುಗಳ ನಾಮವನ್ನು ಜಪಿಸುತ್ತಾ, ಗುರುನಾಮ ಸ್ಮರಣೆಯನ್ನು ವಿಶೇಷವಾಗಿಮಾಡುತ್ತಾ ಸುಜನರು ಸುಖಿಸುವರು. ಸಿರಿವಿಜಯವಿಟ್ಠಲರೇಯನು ಗುರುವಿಲ್ಲದವನಿಗೆ ವೊಲಿಯನಂತೆ !

ಗುರುವಿನಲ್ಲಿ ಮಾಡುವ ಭಕ್ತಿಯು ಎಂದೂ ವ್ಯರ್ಥವಾಗುವುದಿಲ್ಲ. ಮುಕ್ತಿಯೋಗ್ಯಜೀವರಿಗೆ ಗುರುವೇ ಶ್ರೇಷ್ಠ ಉಪಾಸ್ಯಮೂರ್ತಿ. ಗುರುವಿನ ಮೂಲಕವೇ ಶ್ರೀಹರಿಯು ಪ್ರತ್ಯಕ್ಷನಾಗುವನು.

ಗುರುಗಳು ವರವನ್ನೂ, ಶಾಪವನ್ನೂ ಕೊಡುವ ಸಾಮರ್ಥ್ಯವುಳ್ಳವರು. ಗುರುಗಳು ವರವನ್ನಾಗಲೀ ಶಾಪವನ್ನಾಗಲೀ ಕೊಟ್ಟರೆ, ಮೂರುಲೋಕಗಳಲ್ಲಿ ತಿರುಗಿದರೂ ಅವುಗಳಿಂದ ಪ್ರಾಪ್ತವಾಗುವ ಫಲಗಳು ಬಿಡುವುದಿಲ್ಲ ! ವರ-ಶಾಪಗಳ ಮಹತ್ವವು ಒಂದೇ ಜನ್ಮದಲ್ಲಿ ಅನುಭವಿಸಲಾಗದು, ಬಹು ಜನ್ಮಗಳಲ್ಲಿ ಅನುಭವಿಸ-ಬೇಕಾಗುತ್ತದೆ. ಗುರುಗಳು ಕರುಣಮಾಡಿದಂತೆ, ನಾನಾ ಸುಖ-ದುಃಖಗಳನ್ನು ಮರಣ ಪರ್ಯಂತ ವರ-ಶಾಪಗಳನುಸಾರವಾಗಿ ಅನುಭವಿಸಬೇಕು.

ಗುರುಗಳ ಪ್ರಸಾದದಿಂದ, ಮಧ್ವಮತದಲ್ಲಿ ಜನ್ಮತಾಳಿರುವ ಸುಜ್ಞಾನಿ– ಯನ್ನು ನೋಡಿ, ಸಹಿಸಲಾರದೆ, ಅಜ್ಞಾನಿಯೋರ್ವನು ದೂಷಿಸಿದರೆ, ಆ ಸುಜ್ಞಾನಿಗೆ ಏನಾಗುವುದು ? ದೂಷಿಸಿದವನೇ ಅಂತಃಕರಣ ಶುದ್ಧಿ ಇಲ್ಲದೆ ಕೆಟ್ಟುಹೋಗುವನು. ಗುರುಕರುಣೆಯಿಂದ ಮಧ್ವಮತದಲ್ಲಿ ಜನ್ಮತಾಳಿದವ ಪರನಿಂದೆಯಿಂದ ಭಯ ಪಡಬೇಕಾಗಿಲ್ಲ. ಅವನಿಗೆ ಪಾಪಗಳ ಭಯವೂ ಇಲ್ಲ.



ಗುರುಗಳ ಉಪದೇಶವಿಲ್ಲದೆ, ಸ್ವತಂತ್ರವಾಗಿ ದಾಸನಾಗಿ ಶ್ರೀಹರಿಯನ್ನು ತುತಿಸಲು ಫಲವಿಲ್ಲ. ಹಾಗೆ ತುತಿಸಿದರೂ, ಸತತ ಪುಣ್ಯ ಕರ್ಮವನ್ನು ಮಾಡಿದರೂ, ಆ ಪುಣ್ಯಕಾರ್ಯ ಗೊತ್ತಾದ ಫಲಕೊಡದೆ, ವ್ಯರ್ಥವಾಗಿ ಹೋಗುವುದು. ರತಿಪತಿಪಿತನಾದ ವಿಜಯವಿಟ್ಠಲನ ಅತಿಶಯ ದಯವನ್ನು ಪಡೆದ ಗುರುಗಳನ್ನು ಆಶ್ರಯಿಸದೆ ಯಾರಿಗೂ ಮುಕ್ತಿಯಿಲ್ಲ.

ಗುರುದ್ವಾರವೇ ಗತಿ ಎಂದು ನಂಬಿದ, ಪರಮಶಾಂತನಾದ, ದುರ್ಬುದ್ಧಿಯಿರದ, ಸದಾ ಗುರುಗಳನ್ನೇ ನಂಬಿದ ಶಿಷ್ಯನಿಗೆ, ಮಹಾಸಿದ್ಧಾಂತ ಪ್ರಮೇಯಗಳನ್ನು ಗುರುಗಳು ಉಪದೇಶಕೊಡಲು ವಿಜಯವಿಟ್ಠಲರೇಯ, ಪರಮ ಹರುಷಪಟ್ಟು ನಲಿದಾಡುತ್ತಾ ಆ ಕ್ಷಣದಲ್ಲಿಯೇ ದೊರಕುವನಂತೆ !

ನಿಯತ ಗುರುಗಳ ಉಪದೇಶ ಮಾತ್ರದಿಂದಲೇ ಜ್ಞಾನದ ಶುದ್ಧೀಕರಣ, ಪರಿಶುದ್ಧ ಜ್ಞಾನೋಪಾಸನೆಯಿಂದ ಮಾತ್ರವೇ ಹರಿ ದರ್ಶನವಾಗುವುದು.

ತನಗೆ ಏನಾದರೂ ಒಳಿತಾಗಿದ್ದರೆ ಅದು ಗುರುಗಳು ಮತ್ತು ದೇವತೆಗಳು ತನ್ನ ಮೇಲೆ ತೋರಿದ ಕರುಣೆಯ ಫಲ; ಏನಾದರೂ ಕೇಡು ಸಂಭವಿಸಿದ್ದರೆ ಅದು ಸಂಪೂರ್ಣವಾಗಿ ತಾನು ಮಾಡಿದ ಪಾಪಕರ್ಮದ ವಿಪಾಕ – ಎಂಬ ಸದ್ಭಾವನೆ ಯಾರಲ್ಲಿ ಜಾಗೃತವಾಗಿದೆಯೋ ಅಂಥ ಸತ್ಪುರುಷನಿಗೆ ಮಾತ್ರವೆ ವಿದ್ಯೆ ಫಲಿಸುತ್ತದೆ.

ಶ್ರೀಃ : ಹರಿಃ ಓಂ

ನ ಂ ದಾ ದೀ ಪ  ಹ ಚ್ಚಿ ರ ಬೇ ಕು

ಪೂರ್ವ ಅಥವಾ ಉತ್ತರ ದಿಕ್ಕಿಗೆ ಮುಖಮಾಡಿ ಕುಳಿತು ಆಚಮನ

**ಸಂ ಕ ಲ್ಪ**

( ದೇ ಶ ಕಾ ಲೌ ಸ ಂ ಕೀ ರ್ತ್ಯ )

ಶುಭೇ ಶೋಭನೇ ಮುಹೂರ್ತೇ ಅದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೆ ಶ್ರೀಶ್ವೇತವರಾಹ ಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೆ ಪ್ರಥಮ ಪಾದೇ ಭರತವರ್ಷೇ ಭರತಖಂಡೇ ಜಂಬೂ ದ್ವೀಪೇ ದಂಡಕಾರಣ್ಯೇ ಗೋದಾವರ್ಯಾಃ ದಕ್ಷಿಣೇ ತೀರೇ ಶಾಲಿವಾಹನಶಕೇ ಬೌದ್ಧಾವತಾರೇ ರಾಮಕ್ಷೇತ್ರೇ ಅಸ್ಮಿನ್ ವರ್ತಮಾನೇ ಚಾಂದ್ರಮಾನೇನ ವ್ಯವಹಾರಿಕೇ ಶ್ರೀಮತ್ (*) ನಾಮ ಸಂವತ್ಸರೇ (*) ಆಯನೇ (*) ಋತೌ (*) ಮಾಸೇ (*) ಪಕ್ಷೇ (*) ಶುಭ ತಿಥೌ (*) ವಾಸರಯುಕ್ತಾಯಾಂ ಶುಭನಕ್ಷತ್ರ ಶುಭಯೋಗ ಶುಭಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಇಷ್ಟ ದೇವತಾ ಕುಲದೇವತಾ ಏತನ್ಮಾಸ ನಿಯಾಮಕ (*) ಮೂರ್ತ್ಯಾತ್ಮಕ ಶ್ರೀಲಕ್ಷ್ಮೀನಾರಾಯಣ ಪ್ರೇರಣಯಾ ಶ್ರೀಲಕ್ಷ್ಮೀನಾರಾಯಣ ಪ್ರೀತ್ಯರ್ಥಂ ಭಗವತೋ ಬಲೇನ ಭಗವತೋ ವೀರ್ಯೇಣ ಭಗವತಸ್ತೇಜಸಾ ಭಗವತಃ ಕರ್ಮಣಾ ಮಮ ಯೋಗ್ಯತಾನು ಸಾರೇಣ ಹರಿವಾಯುಗುರು ಭಜನಾಖ್ಯ ಕರ್ಮಂ ಕರಿಷ್ಯೇ । (ಮಂತ್ರಾಕ್ಷತೆ ನೀರು ಬಿಡಬೇಕು)

## ಸಂವತ್ಸರಗಳು (೬೦)

| | | | |
|---|---|---|---|
| ಪ್ರಭವ | ವಿಭವ | ಶುಕ್ಲ | ಪ್ರಮೋದ |
| ಪ್ರಜೋತ್ಪತ್ತಿ | ಅಂಗಿರಸ | ಶ್ರೀಮುಖ | ಭಾವ |
| ಯುವ | ಧಾತೃ | ಈಶ್ವರ | ಬಹುಧಾನ್ಯ |
| ಪ್ರಮಾಥೀ | ವಿಕ್ರಮ | ವೃಷ (ವಿಷು) | ಚಿತ್ರಭಾನು |
| ಸ್ವಭಾನು | ತಾರಣ | ಪಾರ್ಥಿವ | (ಅ)ವ್ಯಯ |
| ಸರ್ವಜಿತ್ | ಸರ್ವಧಾರಿ | ವಿರೋಧಿ | ವಿಕೃತಿ |
| ಖರ | ನಂದನ | ವಿಜಯ | ಜಯ |
| ಮನ್ಮಥ | ದುರ್ಮುಖಿ | ಹೇವಿಳಂಬಿ | ವಿಳಂಬಿ |
| ವಿಕಾರಿ | ಶಾರ್ವರಿ | ಪ್ಲವ | ಶುಭಕೃತ್ |
| ಶೋಭನಕೃತ್ | ಕ್ರೋಧಿ | ವಿಶ್ವಾವಸು | ಪರಾಭವ |
| ಪ್ಲವಂಗ | ಕೀಲಕ | ಸೌಮ್ಯ | ಸಾಧಾರಣ |
| ವಿರೋಧಿಕೃತ್ | ಪರಿಧಾವಿ | ಪ್ರಮಾದೀ | ಆನಂದ |
| ರಾಕ್ಷಸ | ನಳ | ಪಿಂಗಳ | ಕಾಳಯುಕ್ತಿ |
| ಸಿದ್ಧಾರ್ಥಿ | ರೌದ್ರಿ | ದುರ್ಮತಿ | ದುಂದುಭಿ |
| ರುಧಿರೋದ್ಗಾರಿ | ರಕ್ತಾಕ್ಷಿ | ಕ್ರೋಧನ | ಕ್ಷಯ |

## ಆಯನ

೧. ಉತ್ತರಾಯಣ : ಸೂರ್ಯನು ಮಕರ ರಾಶಿಯಿಂದ ಮಿಥುನ ರಾಶಿ ಪೂರ್ತಿ ಆರು ರಾಶಿಗಳಲ್ಲಿ ಸಂಚರಿಸುವ ಕಾಲ – ಜನವರಿ ೧೪ ರಿಂದ ಜುಲೈ ೧೫ ರವರೆಗೆ

೨. ದಕ್ಷಿಣಾಯನ : ಸೂರ್ಯನು ಕಟಕ ರಾಶಿಯಿಂದ ಧನಸ್ಸು ರಾಶಿ ಪೂರ್ತಿ ಆರು ರಾಶಿಗಳಲ್ಲಿ ಸಂಚರಿಸುವ ಕಾಲ – ಜುಲೈ ೧೬ ರಿಂದ ಜನವರಿ ೧೪ ರವರೆಗೆ

## ಋ ತು : ಮಾ ಸ : ಪ ಕ್ಷ : ಮಾ ಸ ನಿ ಯಾ ಮ ಕ  ಭ ಗ ವ ದ್ರೂ ಪ ಗ ಳು

| ಋತು | ಮಾಸ | – | ಪಕ್ಷ | ಮಾಸ ನಿಯಾಮಕ |
|---|---|---|---|---|
| ವಸಂತ | ಚೈತ್ರ | – | ಶುಕ್ಲಪಕ್ಷ | ಶ್ರೀ ವಿಷ್ಣು |
| ವಸಂತ | ಚೈತ್ರ | – | ಕೃಷ್ಣಪಕ್ಷ | ಶ್ರೀ ಮಧುಸೂದನ |
| ವಸಂತ | ವೈಶಾಖ | – | ಶುಕ್ಲಪಕ್ಷ | ಶ್ರೀ ಮಧುಸೂದನ |
| ವಸಂತ | ವೈಶಾಖ | – | ಕೃಷ್ಣಪಕ್ಷ | ಶ್ರೀ ತ್ರಿವಿಕ್ರಮ |
| ಗ್ರೀಷ್ಮ | ಜೇಷ್ಠ | – | ಶುಕ್ಲಪಕ್ಷ | ಶ್ರೀ ತ್ರಿವಿಕ್ರಮ |
| ಗ್ರೀಷ್ಮ | ಜೇಷ್ಠ | – | ಕೃಷ್ಣಪಕ್ಷ | ಶ್ರೀ ವಾಮನ |
| ಗ್ರೀಷ್ಮ | ಆಷಾಢ | – | ಶುಕ್ಲಪಕ್ಷ | ಶ್ರೀ ವಾಮನ |
| ಗ್ರೀಷ್ಮ | ಆಷಾಢ | – | ಕೃಷ್ಣಪಕ್ಷ | ಶ್ರೀ ಶ್ರೀಧರ |
| ವರ್ಷಾ | ಶ್ರಾವಣ | – | ಶುಕ್ಲಪಕ್ಷ | ಶ್ರೀ ಶ್ರೀಧರ |
| ವರ್ಷಾ | ಶ್ರಾವಣ | – | ಕೃಷ್ಣಪಕ್ಷ | ಶ್ರೀ ಹೃಷೀಕೇಶ |
| ವರ್ಷಾ | ಭಾದ್ರಪದ | – | ಶುಕ್ಲಪಕ್ಷ | ಶ್ರೀ ಹೃಷೀಕೇಶ |
| ವರ್ಷಾ | ಭಾದ್ರಪದ | – | ಕೃಷ್ಣಪಕ್ಷ | ಶ್ರೀ ಪದ್ಮನಾಭ |
| ಶರದ್ | ಆಶ್ವಯುಜ | – | ಶುಕ್ಲಪಕ್ಷ | ಶ್ರೀ ಪದ್ಮನಾಭ |
| ಶರದ್ | ಆಶ್ವಯುಜ | – | ಕೃಷ್ಣಪಕ್ಷ | ಶ್ರೀ ದಾಮೋದರ |
| ಶರದ್ | ಕಾರ್ತೀಕ | – | ಶುಕ್ಲಪಕ್ಷ | ಶ್ರೀ ದಾಮೋದರ |
| ಶರದ್ | ಕಾರ್ತೀಕ | – | ಕೃಷ್ಣಪಕ್ಷ | ಶ್ರೀ ಕೇಶವ |
| ಹೇಮಂತ | ಮಾರ್ಗಶಿರ | – | ಶುಕ್ಲಪಕ್ಷ | ಶ್ರೀ ಕೇಶವ |
| ಹೇಮಂತ | ಮಾರ್ಗಶಿರ | – | ಕೃಷ್ಣಪಕ್ಷ | ಶ್ರೀ ನಾರಾಯಣ |
| ಹೇಮಂತ | ಪುಷ್ಯ | – | ಶುಕ್ಲಪಕ್ಷ | ಶ್ರೀ ನಾರಾಯಣ |
| ಹೇಮಂತ | ಪುಷ್ಯ | – | ಕೃಷ್ಣಪಕ್ಷ | ಶ್ರೀ ಮಾಧವ |
| ಶಿಶಿರ | ಮಾಘ | – | ಶುಕ್ಲಪಕ್ಷ | ಶ್ರೀ ಮಾಧವ |
| ಶಿಶಿರ | ಮಾಘ | – | ಕೃಷ್ಣಪಕ್ಷ | ಶ್ರೀ ಗೋವಿಂದ |
| ಶಿಶಿರ | ಫಾಲ್ಗುಣ | – | ಶುಕ್ಲಪಕ್ಷ | ಶ್ರೀ ಗೋವಿಂದ |
| ಶಿಶಿರ | ಫಾಲ್ಗುಣ | – | ಕೃಷ್ಣಪಕ್ಷ | ಶ್ರೀ ವಿಷ್ಣು |

## ವಾ ರ ನಿ ಯಾ ಮ ಕ ಭ ಗ ವ ದ್ರೂ ಪ ಗ ಳು

| | | |
|---|---|---|
| ಭಾನುವಾರ | ಭಾನುವಾಸರ | ಶ್ರೀನಾರಾಯಣ |
| ಸೋಮವಾರ | ಇಂದುವಾಸರ | ಶ್ರೀ ನರಸಿಂಹ |
| ಮಂಗಳವಾರ | ಭೌಮ್ಯವಾಸರ | ಶ್ರೀ ವೇದವ್ಯಾಸ |
| ಬುಧವಾರ | ಸೌಮ್ಯವಾಸರ | ಶ್ರೀ ಪಾಂಡುರಂಗ |
| ಗುರುವಾರ | ಬೃಹಸ್ಪತಿವಾಸರ | ಶ್ರೀ ಸೀತಾರಾಮ |
| ಶುಕ್ರವಾರ | ಭಾರ್ಗವವಾಸರ | ಶ್ರೀ ಕೃಷ್ಣ |
| ಶನಿವಾರ | ಸ್ಥಿರವಾಸರ | ಶ್ರೀ ವೆಂಕಟೇಶ |

## ನ ಕ್ಷ ತ್ರ ಗ ಳು (೨೭)

| | | |
|---|---|---|
| ಅಶ್ವಿನೀ | ಭರಣೀ | ಕೃತ್ತಿಕಾ |
| ರೋಹಿಣೀ | ಮೃಗಶಿರಾ | ಆದ್ರಾ್ರ |
| ಪುನರ್ವಸು | ಪುಷ್ಯಾ | ಆಶ್ಲೇಷಾ |
| ಮಘಾ | ಪುಬ್ಬಾ (ಪೂರ್ವಫಾಲ್ಗುಣಿ) | ಉತ್ತರ (ಉತ್ತರಫಾಲ್ಗುಣಿ) |
| ಹಸ್ತಾ | ಚಿತ್ರಾ | ಸ್ವಾತೀ |
| ವಿಶಾಖಾ | ಅನುರಾಧಾ | ಜ್ಯೇಷ್ಠಾ |
| ಮೂಲಾ | ಪೂರ್ವಾಷಾಢಾ | ಉತ್ತರಾಷಾಢಾ |
| ಶ್ರವಣ | ಧನಿಷ್ಠಾ | ಶತಭಿಷಾ |
| ಪೂರ್ವಾಭಾದ್ರಾ | ಉತ್ತರಾಭಾದ್ರಾ | ರೇವತೀ |

## ಯೋ ಗ ಗ ಳು (೨೭)

| | | | | | |
|---|---|---|---|---|---|
| ವಿಷ್ಕಂಭರ | ಪ್ರೀತಿ | ಆಯುಷ್ಮಾನ್ | ಸೌಭಾಗ್ಯ | ಶೋಭನ | ಅತಿಗಂಡ |
| ಸುಕರ್ಮಾ | ಧೃತಿ | ಶೂಲ | ಗಂಡ | ವೃದ್ಧಿ | ಧ್ರುವ |
| ವ್ಯಾಘಾತ | ಹರ್ಷಣ | ವಜ್ರ | ಸಿದ್ಧಿ | ವ್ಯತೀಪಾತ | ವರೀಯಾನ್ |
| ಪರಿಘ | ಶಿವ | ಸಿದ್ಧ | ಸಾಧ್ಯ | ಶುಭ | ಶುಕ್ಲ |
| ಬ್ರಹ್ಮ | ಐಂದ್ರ | ವೈಧೃತಿ | | | |

ಯೋಗವೆಂದರೆ ಸೂರ್ಯಚಂದ್ರರಿಬ್ಬರ ಸ್ಫುಟದ ಮೊತ್ತ ಎಂದರೆ ಉದಯಾದಿಯಲ್ಲಿ ಸೂರ್ಯ ಮತ್ತು ಚಂದ್ರ ಇರುವ ರಾಶಿಯ ಡಿಗ್ರಿ ನಿಮಿಷಗಳ ಮೊತ್ತವೇ ಯೋಗ. ಈ ಕೆಳಗಿನ ಯೋಗಗಳ ಕೊನೆಯ ಗಳಿಗೆಗಳು ಅನಿಷ್ಟ ಫಲದಾಯಕಗಳು. ವಿಷ್ಕಂಭರ ಕೊನೆಯ ೫ ಗಳಿಗೆ, ಅತಿಗಂಡ ೬, ಶುಭ ೬, ಗಂಡ ೬, ವ್ಯಾಘಾತ ೩, ವಜ್ರ ೯, ವ್ಯತೀಪಾತ ೩೦, ಪರಿಘ ೩, ವೈಧೃತಿ ೧೫, ಇವನ್ನು ಶುಭ ಕಾರ್ಯಗಳಿಗೆ ನಿಷೇಧಿಸಿದೆ.

## ಕ ರ ಣ ಗ ಳು (೧೧)

| | | |
|---|---|---|
| ಬವ (ಸಿಂಹ) | ಬಾಲವ (ಹುಲಿ) | ಕೌಲವ (ಹಂದಿ) |
| ತೈತಿಲ (ಕತ್ತೆ) | ಗರ (ಆನೆ) | ವಣಿಕ್ (ಎಮ್ಮೆ) |
| ಭದ್ರ (ಕುದುರೆ) | ಶಕುನಿ (ನಾಯಿ) | ಚತುಷ್ಪಾತ್(ಎತ್ತು) |
| ನಾಗವಾನ್ (ಸರ್ಪ) | ಕಿಂಸ್ತುಘ್ನ (ಕೋಳಿ) | |

ಸೂರ್ಯಚಂದ್ರರ ನಡುವಿನ ವ್ಯತ್ಯಾಸವೇ ಕರಣ. ಇದನ್ನು ತಿಥಿಯ ಅರ್ಧ ಭಾಗವಾಗಿಯೂ ಲೆಕ್ಕಾಚಾರ ಹಾಕುತ್ತಾರೆ. ಕರಣಗಳಲ್ಲಿ ಎರಡು ವಿಧ. ಬವ, ಬಾಲವ, ಕೌಲವ, ತೈತಿಲ, ಗರಜ, ವಣಿಜ, ಭದ್ರ ಈ ಏಳು ಕರಣಗಳಿಗೆ ಚರ ಕರಣಗಳು ಎಂದು ಹೆಸರು. ಇವು ತಿಥಿಗೆ ತಕ್ಕಂತೆ ಪರಿವರ್ತನೆಗೊಳ್ಳುತ್ತಿರುತ್ತವೆ. ಶಕುನಿ, ಚತುಷ್ಪಾತ್, ನಾಗವಾನ್, ಕಿಂಸ್ತುಘ್ನ, ಇವು ನಾಲ್ಕು ಸ್ಥಿರ ಕರಣಗಳು. ಕೃಷ್ಣಪಕ್ಷದ ಚತುರ್ದಶಿಯ ಪೂರ್ವಾರ್ಧದಿಂದ ಉತ್ತರಾರ್ಧದವರೆಗೆ ಮಾತ್ರ ಇರುತ್ತವೆ. ಶುಭ ಕಾರ್ಯಗಳಿಗೆ ಸ್ಥಿರ ಕರಣಗಳು ಯೋಗ್ಯವಲ್ಲ.

www.vijayadasaru.net



## ತಿ ಥ್ಯ ಭಿ ಮಾ ನಿ ದೇ ವ ತೆ ಗ ಳು

| | |
|---|---|
| ಪ್ರತಿಪತ್ – ಅಗ್ನಿ | ದ್ವಿತೀಯಾ – ಬ್ರಹ್ಮಾ |
| ತೃತೀಯಾ – ಗೌರೀ | ಚತುರ್ಥೀ – ಗಣಪತಿ |
| ಪಂಚಮೀ – ಸರ್ಪಗಳು | ಷಷ್ಠೀ – ಸ್ಕಂದ |
| ಸಪ್ತಮೀ – ಸೂರ್ಯ | ಅಷ್ಟಮೀ – ಸದ್ಯೋಜಾತ |
| ನವಮೀ – ದುರ್ಗಾ | ದಶಮೀ – ಶೇಷ |
| ಏಕಾದಶೀ – ಧರ್ಮ | ದ್ವಾದಶೀ – ಹರಿ |
| ತ್ರಯೋದಶೀ – ಕಾಮ | ಚತುರ್ದಶೀ – ಕಲಿ |
| ಪೂರ್ಣಿಮಾ – ಚಂದ್ರ | ಅಮಾವಾಸ್ಯೆ – ಪಿತೃಗಳು |

ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣಗಳನ್ನು ಹೇಳುವುದರಿಂದ ಫಲ

ತಿಥೇಶ್ಚ ಶ್ರಿಯಮಾಪ್ನೋತಿ
ವಾರಾದಾಯುಷ್ಯ ವರ್ಧನಂ
ನಕ್ಷತ್ರಾದ್ಧರತೇ ಪಾಪಂ
ಯೋಗಾದ್ರೋಗ ನಿವಾರಣಂ
ಕರಣಾತ್ಕಾರ್ಯ ಸಿದ್ಧಿಸ್ಸ್ಯಾತ್
ಪಂಚಾಂಗ ಫಲಮುತ್ತಮಮ್

ಆದ್ದರಿಂದ ಯಾವುದೇ ಕಾರ್ಯ ಸಿದ್ಧಿಗಾಗಿ ಸಂಕಲ್ಪ ಮಾಡುವಾಗ, ಯಾವುದೇ ಶುಭ ಕಾರ್ಯ ಮಾಡುವಾಗ, ಅಂದಂದಿನ ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣಗಳನ್ನು ಪಂಚಾಂಗದಿಂದ ತಿಳಿದು ತಪ್ಪದೆ ಹೇಳಬೇಕು.

www.vijayadasaru.net



## ಸ ರ್ವ ಗು ರು ನ ಮ ನ

ಶ್ರೀಗುರುಭ್ಯೋ ನಮಃ । ಶ್ರೀಪರಮಗುರುಭ್ಯೋ ನಮಃ । ಶ್ರೀ ಮದಾನಂದತೀರ್ಥ ಭಗವತ್ಪಾದಾಚಾರ್ಯ ಗುರುಭ್ಯೋ ನಮಃ । ಶ್ರೀ ಆದಿ ಗುರುಭ್ಯೋ ನಮಃ । ಶ್ರೀವೇದವ್ಯಾಸಾಯ ನಮಃ । ಶ್ರೀಭಾರತ್ಯೈನಮಃ । ಶ್ರೀಸರಸ್ವತ್ಯೈ ನಮಃ । ಶ್ರೀವಾಯವೇ ನಮಃ । ಶ್ರೀಬ್ರಹ್ಮಣೇ ನಮಃ । ಶ್ರೀಮಹಾಲಕ್ಷ್ಮ್ಯೈ ನಮಃ । ಶ್ರೀಮನ್ನಾರಾಯಣಾಯ ನಮಃ । ಶ್ರೀ ಲಕ್ಷ್ಮೀ ಹಯಗ್ರೀವಾಯ ನಮಃ ।

## ಧ್ಯಾನ ಶ್ಲೋಕಗಳು

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ ॥

ಶುಭ್ರವಾದ ವಸ್ತ್ರವನ್ನು ಧರಿಸಿರುವ ಚಂದ್ರನಂತೆ ಶ್ವೇತ ಬಣ್ಣದವನಾದ ನಾಲ್ಕು ಭುಜಗಳುಳ್ಳ ಪ್ರಸನ್ನವಾದ ಮುಖವುಳ್ಳ ವಿಶ್ವಂಭರಮೂರ್ತಿ ಭಗವಂತನನ್ನು ಎಲ್ಲ ಅಡಚಣೆಗಳ ತಡೆಗಾಗಿ ಧ್ಯಾನಿಸುವೆ.

ಸರ್ವವಿಘ್ನ ಪ್ರಶಮನಂ ಸರ್ವ ಸಿದ್ಧಿಕರಂ ಪರಂ ।
ಸರ್ವಜೀವ ಪ್ರಣೇತಾರಂ ವಂದೇ ವಿಜಯದಂ ಹರಿಂ ॥

ಎಲ್ಲ ವಿಘ್ನಗಳನ್ನು ಶಮನಗೊಳಿಸುವ ನಮ್ಮ ಅಭೀಷ್ಟವನ್ನು ಪೂರೈಸುವ ಸರ್ವ ಜೀವಿಗಳಿಗೂ ಪ್ರೇರಕನಾದ ಯಶಸ್ಸನ್ನು ನೀಡುವ ಹರಿಯನ್ನು ನಮಿಸುವೆ.

ಸಮಚರಣ ಸರೋಜಂ ಸಾಂದ್ರ ನೀಲಾಂಬುದಾಭಂ ।
ಜಘನ ನಿಹಿತ ಪಾಣಿಂ ಮಂಡನಂ ಮಂಡನಾನಾಂ ॥
ತರುಣ ತುಲಸಿ ಮಾಲಾ ಕಂಧರಂ ಕಂಜನೇತ್ರಂ ।
ಸದಯ ಧವಲ ಹಾಸಂ ವಿಟ್ಠಲಂ ಚಿಂತಯಾಮಿ ॥

www.vijayadasaru.net



ಕಮಲದಂತಹ ಪಾದಗಳುಳ್ಳ ನಿಬಿಡವಾದ ನೀಲ ಮೇಘದ ಕಾಂತಿಯನ್ನು ಧರಿಸಿರುವ ಟೊಂಕದ ಮೇಲೆ ಕೈಯನ್ನಿಟ್ಟು ಅಲಂಕಾರಗಳಿಗೆ ಅಲಂಕಾರನಾದ ಎಳೆಯ ತುಳಸೀ ಮಾಲೆಯನ್ನು ಕಂಠದಲ್ಲಿ ಧರಿಸಿದ ಕಮಲದಂತೆ ವಿಶಾಲ ಕಣ್ಣುಳ್ಳ ದಯಾಪೂರ್ಣವಾದ ಶುಭ್ರ ಮಂದಹಾಸದಿಂದ ಶೋಭಿತನಾದ ವಿಟ್ಠಲನನ್ನು ಚಿಂತಿಸುವೆ.

ಕಲ್ಯಾಣಾದ್ಭುತಗಾತ್ರಾಯ ಕಾಮಿತಾರ್ಥಪ್ರದಾಯಿನೇ ।
ಶ್ರೀಮದ್ವೇಂಕಟನಾಥಾಯ ಶ್ರೀನಿವಾಸಾಯತೇ ನಮಃ ॥

ಮಂಗಳವಾದ ದಿವ್ಯವಾದ ಶರೀರವನ್ನು ಧರಿಸಿರುವ ಇಷ್ಟಾರ್ಥವನ್ನು ನೀಡುವ ನಮ್ಮ ಪಾಪ ಪರಿಹಾರಕನೂ ಒಡೆಯನೂ ಆದ ಶ್ರೀನಿವಾಸನೆನಿಸಿದ ನಿನಗೆ ನಮಸ್ಕಾರವು.

ಶ್ರೀಮತ್ ಸೌಭಾಗ್ಯ ಜನನೀಂ ಸ್ತೌಮಿ ಲಕ್ಷ್ಮೀಂ ಸನಾತನೀಂ ।
ಸರ್ವಕಾಮ ಫಲಾವಾಪ್ತ್ಯೈ ಸಾಧನೈಕ ಸುಖಾವಹಾಮ್ ॥

ಸಂಪತ್ತಿನಿಂದ ಕೂಡಿದ ಸೌಭಾಗ್ಯವನ್ನು ಕರುಣಿಸುವ ಕೇವಲ ಸಾಧನೆಯನ್ನೇ ಗಮನಿಸಿ ಸುಖವನ್ನೀಯುವ ಸನಾತನಿಯಾದ ಲಕ್ಷ್ಮಿಯನ್ನು ಎಲ್ಲ ಅಭೀಷ್ಟಗಳ ಪ್ರಾಪ್ತಿಗಾಗಿ ಸ್ತುತಿಸುವೆ.

ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಮರೋಗತಾ ।
ಅಜಾಡ್ಯಂ ವಾಕ್ಪಟುತ್ವಂ ಚ ಹನೂಮತ್ ಸ್ಮರಣಾದ್ಭವೇತ್ ॥

ಜ್ಞಾನ, ಬಲ, ಯಶಸ್, ಧೈರ್ಯ, ಭಯರಾಹಿತ್ಯ, ಆರೋಗ್ಯ, ಜಾಡ್ಯವಿಲ್ಲದಿರುವಿಕೆ, ಶ್ರೇಷ್ಠಮಾತುಗಾರಿಕೆ, ಇವೆಲ್ಲವೂ ಹನೂಮಂತನ ಸ್ಮರಣೆಯಿಂದ ಲಭಿಸುತ್ತದೆ.

ಭವತಿ ಯದನುಭಾವಾದೇಡ ಮೂಕೋಽಪಿ ವಾಗ್ಮೀ ।
ಜಡಮತಿರಪಿ ಜಂತುರ್ಜಾಯತೇ ಪ್ರಾಜ್ಞ ಮೌಲಿಃ ॥
ಸಕಲವಚನ ಚೇತೋ ದೇವತಾ ಭಾರತೀ ಸಾ ।
ಮಮ ವಚಸಿ ನಿಧತ್ತಾಂ ಸನ್ನಿಧಿಂ ಮಾನಸೇ ಚ ॥

ಯಾರ ಪ್ರಭಾವದಿಂದ ಜನ್ಮತಃ ಮೂಕನೂ ವಾಗ್ಮಿಯಾಗುತ್ತಾನೋ, ಮಂದ ಬುದ್ಧಿಯವನೂ ಶ್ರೇಷ್ಠ ವಿದ್ವಾಂಸನಾಗುತ್ತಾನೋ ಅಂತಹ ಎಲ್ಲ ಮಾತಿಗೂ ಮನಸ್ಸಿಗೂ ಅಭಿಮಾನಿಯಾದ ಭಾರತೀದೇವಿಯು ನನ್ನ ಮನಸ್ಸಿನಲ್ಲಿಯೂ ವಚನದಲ್ಲಿಯೂ ನೆಲಸಲಿ.

ಮಿಥ್ಯಾಸಿದ್ಧಾಂತ ದುರ್ಧ್ವಾಂತ ವಿಧ್ವಂಸನ ವಿಚಕ್ಷಣಃ ।
ಜಯತೀರ್ಥಾಖ್ಯ ತರಣಿರ್ಭಾಸತಾಂ ನೋ ಹೃದಂಬರೇ ॥

ಈ ಜಗತ್ತು ಕೇವಲ ಕಾಲ್ಪನಿಕ (ಅಸತ್ಯ) ಎಂದು ಪ್ರತಿಪಾದಿಸುವ ಅದ್ವೈತ ಸಿದ್ಧಾಂತವು ಕತ್ತಲಿನ ಹಾಗೆ ಇರುವುದು. ಆ ಕತ್ತಲನ್ನು ನಾಶಪಡಿಸುವುದರಲ್ಲಿ ಸಮರ್ಥರು ಜಯತೀರ್ಥರೆಂಬ ಸೂರ್ಯರು. ಅವರು ನಮ್ಮ ಹೃದಯದಲ್ಲಿ ಸದಾ ಪ್ರಕಾಶಿಸಲಿ.

ಕಂಸಧ್ವಂಸಿ ಪದಾಂಭೋಜ ಸಂಸಕ್ತೋ ಹಂಸಪುಂಗವಃ ।
ಬ್ರಹ್ಮಣ್ಯ ಗುರುರಾಜಾಖ್ಯೋ ವರ್ತತಾಂ ಮಮ ಮಾನಸೇ ॥

ಕಂಸನನ್ನು ಸಂಹರಿಸಿದ ಕೃಷ್ಣನ ಪಾದವೆಂಬ ಕಮಲದಲ್ಲಿ ಆಸಕ್ತರೂ ಯತಿಶ್ರೇಷ್ಠರೂ ಆದ ಬ್ರಹ್ಮಣ್ಯತೀರ್ಥರು ನನ್ನ ಮನಸ್ಸೆಂಬ ಮಾನಸಸರೋವರದಲ್ಲಿ ವಾಸಿಸಲಿ.

ಕಾಲೇ ಫಲತಿ ಸುರದ್ರುಃ ಚಿಂತಾಮಣಿರಪಿ ಯಾಚನೇ ದಾತಾ ।
ವರ್ಷತಿ ಸಕಲಮಭೀಷ್ಟಂ ದರ್ಶನ ಮಾತ್ರಾತ್ ಶ್ರೀಪಾದರಾಣ್ಮುನಿಃ ॥

ಕಲ್ಪವೃಕ್ಷವು ಯೋಗ್ಯಕಾಲದಲ್ಲಿ ಮಾತ್ರ ಫಲವನ್ನು ನೀಡುತ್ತದೆ. ಚಿಂತಾಮಣಿಯು ಚಿಂತಿಸಿದರೆ ಮಾತ್ರ ಕೊಡುತ್ತದೆ. ಶ್ರೀಪಾದರಾಜರು ಕೇವಲ ದರ್ಶನ ಮಾತ್ರದಿಂದಲೆ ಎಲ್ಲ ಅಭೀಷ್ಟಗಳನ್ನು ನೆರವೇರಿಸುವರು.

ಅರ್ಥಿಕಲ್ಪಿತ ಕಲ್ಪೋಽಯಂ ಪ್ರತ್ಯರ್ಥಿ ಗಜಕೇಸರೀ ।
ವ್ಯಾಸತೀರ್ಥ ಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ॥

www.vijayadasaru.net



ಬೇಡುವವರಿಗೆ ಕಲ್ಪವೃಕ್ಷದಂತಿರುವ ಪ್ರತಿವಾದಿಗಳೆಂಬ ಆನೆಗಳಿಗೆ ಸಿಂಹದಂತಿರುವ ವ್ಯಾಸತೀರ್ಥರು ನನ್ನ ಅಭೀಷ್ಟಗಳನ್ನು ಪೂರೈಸಲಿ.

ತಪೋ ವಿದ್ಯಾ ವಿರಕ್ತ್ಯಾದಿ ಸದ್ಗುಣೌಘಾಕರಾನಹಂ ।
ವಾದಿರಾಜ ಗುರೂನ್ ವಂದೇ ಹಯಗ್ರೀವದಯಾಶ್ರಯಾನ್ ॥

ತಪಸ್ಸು, ವಿದ್ಯೆ, ವೈರಾಗ್ಯ, ಇವೇ ಮೊದಲಾದ ಸದ್ಗುಣಗಳ ಸಮೂಹದ ಖನಿಯಾದ, ಹಯಗ್ರೀವದೇವರ ದಯೆಗೆ ಪಾತ್ರರಾದ ವಾದಿರಾಜ ಗುರುಗಳನ್ನು ನಮಿಸುವೆ.

ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯಚ ।
ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥

ಸತ್ಯ ಮತ್ತು ಧರ್ಮದಲ್ಲಿ ಆಸಕ್ತರೂ, ಭಜಿಸುವವರಿಗೆ ಕಲ್ಪವೃಕ್ಷವೂ ನಮಿಸುವವರಿಗೆ ಕಾಮಧೇನುಗಳೂ ಆದ ಪೂಜ್ಯರಾದ ರಾಘವೇಂದ್ರರನ್ನು ನಮಿಸುವೆನು.

ಶ್ರೀಸತ್ಯಬೋಧೋ ನಿಜಕಾಮಧೇನುಃ ।
ಮಾಯಾತಮಃಖಂಡನ ಚಂಡ ಭಾನುಃ ॥
ದುರಂತ ಪಾಪ ಪ್ರದಹೇ ಕೃಶಾನುಃ ।
ದೇಯಾನ್ಮಮೇಷ್ಟಂ ಗುರುರಾಜಸೂನುಃ ॥

ಮಾಯಾವಾದ ಸಿದ್ಧಾಂತವೆಂಬ ತಮಸ್ಸನ್ನು ನಾಶಪಡಿಸುವಲ್ಲಿ ಪ್ರಚಂಡ ಸೂರ್ಯರಾದ, ದುರಂತ ಪಾಪಗಳನ್ನು ದಹಿಸುವಲ್ಲಿ ಬೆಂಕಿಯಾದ, ಭಕ್ತ ಜನರ ಕಾಮಧೇನುಗಳಾದ, ಶ್ರೀಸತ್ಯಪ್ರಿಯತೀರ್ಥ ಗುರುರಾಜರ ಪುತ್ರರಾದ ಸತ್ಯಬೋಧರು ನನ್ನ ಅಭೀಷ್ಟಗಳನ್ನು ನೆರವೇರಿಸಲಿ.

ಮನ್ಮನೋಭೀಷ್ಟ ವರದಂ ಸರ್ವಾಭೀಷ್ಟ ಫಲಪ್ರದಂ ।
ಪುರಂದರ ಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥

ನಮ್ಮ ಮನಸ್ಸಿನಲ್ಲಿನ ಅಭೀಷ್ಟವನ್ನು ಪೂರೈಸುವ, ಎಲ್ಲ ಅಭಿಲಾಷೆಗಳನ್ನು ಫಲಿಸುವಂತೆ ಮಾಡುವ ದಯಾನಿಧಿಗಳಾದ ದಾಸಶ್ರೇಷ್ಠರಾದ ಪುರಂದರ ಗುರುಗಳನ್ನು ವಂದಿಸುವೆ.

ಅಜ್ಞಾನ ತಿಮಿರಚ್ಛೇದಂ ಬುದ್ಧಿ ಸಂಪತ್ ಪ್ರದಾಯಕಂ ।
ವಿಜ್ಞಾನ ವಿಮಲಂ ಶಾಂತಂ ವಿಜಯಾಖ್ಯ ಗುರುಂ ಭಜೇ ॥

ನಮ್ಮ ಅಜ್ಞಾನವೆಂಬ ಅಂಧಕಾರವನ್ನು ನಾಶಮಾಡುವ, ಬುದ್ಧಿ ಸಂಪತ್ತನ್ನು ನೀಡುವ, ಜ್ಞಾನದಿಂದ ಪವಿತ್ರ ಸ್ವರೂಪರಾದ ಭಗವಂತನಲ್ಲಿಯೇ ಮಗ್ನರಾದ ವಿಜಯದಾಸರನ್ನು ಭಜಿಸುತ್ತೇನೆ.

ಗೋಪ ಪ್ರಖರ ಸಂಕಾಶಂ ಗೋಪಾಲಾರ್ಚನ ತತ್ಪರಂ ।
ಗೋದೇವ ವಂದ್ಯ ಪಾದಾಬ್ಜಂ ಗೋಪಾಲಾಖ್ಯ ಗುರುಂ ಭಜೇ ॥

ಸೂರ್ಯನಂತೆ ಪ್ರಖರವಾದ ತೇಜಸ್ಸುಳ್ಳ ಗೋಪಾಲನ ಆರಾಧನೆಯಲ್ಲಿ ಆಸಕ್ತರಾದ ಭೂಮಿಯಲ್ಲಿ ದೇವತೆಗಳಂತೆ ಇರುವ ಬ್ರಾಹ್ಮಣರಿಂದ ಪೂಜಿತವಾದ ಪಾದಕಮಲವುಳ್ಳ ಗುರುಗಳಾದ ಗೋಪಾಲದಾಸರನ್ನು ವಂದಿಸುವೆನು.

ಮೋಹಭಯ ದುಃಖಾದಿದೂರಂ ಲೋಹಲೋಷ್ಠ ಸಮೇಕ್ಷಣಂ ।
ಮಾಹಿತಾಂಘ್ರಿ ಸರೋಜಭೃಂಗಂ ಮೋಹನಾರ್ಯಗುರುಂ ಭಜೇ ॥

ಮಮಕಾರ, ಹೆದರಿಕೆ ಮತ್ತು ದುಃಖವಿಲ್ಲದವರೂ, ಬಂಗಾರ, ಬೆಳ್ಳಿ ಮೊದಲಾದ ಬೆಲೆಬಾಳುವ ವಸ್ತುಗಳೂ, ಕಲ್ಲೂ ಒಂದೇ ಎಂದು ಕಾಣುವ, ಸರ್ವೋತ್ತಮನಾದ ಶ್ರೀಹರಿಯ ಪಾದಕಮಲಕ್ಕೆ ದುಂಬಿಯಂತೆ ಸೇರಲು ಆಸಕ್ತರಾದ ಗುರುಗಳಾದ, ಮೋಹನದಾಸವರ್ಯರನ್ನು ಭಜನೆ ಮಾಡುತ್ತೇನೆ.

ಜಲಜೇಷ್ಟ ನಿಭಾಕಾರಂ ಜಗದೀಶ ಪದಾಶ್ರಯಂ ।
ಜಗತೀತಲ ವಿಖ್ಯಾತಂ ಜಗನ್ನಾಥ ಗುರುಂ ಭಜೇ ॥

ಕಮಲಗಳಿಗೆ ಪ್ರೀತಿಪಾತ್ರನಾದ ಸೂರ್ಯನಂತೆ ಇರುವ, ಭಗವಂತನ ಪಾದವನ್ನು ಆಶ್ರಯಿಸಿರುವ, ಜಗತ್ತಿನಲ್ಲಿ ವಿಖ್ಯಾತರಾದ ಜಗನ್ನಾಥ ದಾಸರನ್ನು ಭಜಿಸುತ್ತೇನೆ.

ಪೃಥ್ವೀ ಮಂಡಲ ಮಧ್ಯಸ್ಥಾಃ ಪೂರ್ಣಬೋಧ ಮತಾನುಗಾಃ ।
ವೈಷ್ಣವಾಃ ವಿಷ್ಣು ಹೃದಯಾಸ್ತಾನ್ನಮಸ್ಯೇ ಗುರೂನ್ಮಮ ॥

ಭೂಮಂಡಲದಲ್ಲಿ ವಾಸಿಸುತ್ತಿರುವ ಮಧ್ವಾಚಾರ್ಯರ ಮತವನ್ನು ಅನುಸರಿಸುತ್ತಿರುವ ವಿಷ್ಣುವಿನ ಧ್ಯಾನದಲ್ಲಿರತರಾದ ಆ ವೈಷ್ಣವ ಗುರುಗಳೆಲ್ಲರನ್ನು ನಮಿಸುವೆ.



ಉ ಗಾ ಭೋ ಗ : ರಾ ಗ – ನಾ ಟಿ

ಎಲ್ಲಿ ಹರಿಕಥಾ ಪ್ರಸಂಗವೋ ।
ಅಲ್ಲಿ ಗಂಗಾ ಯಮುನಾ ಗೋದಾವರಿ ಸರಸ್ವತೀ ಸಿಂಧು ॥
ಎಲ್ಲ ತೀರ್ಥಗಳು ಬಂದು ಎಣೆಯಾಗಿ ನಿಲ್ಲುವವು ।
ವಲ್ಲಭ ಶ್ರೀಪುರಂದರ ವಿಟ್ಠಲನು ಮೆಚ್ಚುವನು ॥



ಉ ಗಾ ಭೋ ಗ : ರಾ ಗ – ನಾ ಟಿ


ಜಯ ಜಯ ಹರಿ ಎಂಬುವುದೆ ಸುದಿನವು ।
ಜಯ ಜಯ ಹರಿ ಎಂಬುವುದೆ ತಾರಾ ಬಲವು ।
ಜಯ ಜಯ ಹರಿ ಎಂಬುವುದೆ ಚಂದ್ರ ಬಲವು ।
ಜಯ ಜಯ ಹರಿ ಎಂಬುವುದೆ ವಿದ್ಯಾ ಬಲವು ।
ಜಯ ಜಯ ಹರಿ ಎಂಬುವುದೆ ದೈವ ಬಲವು ।
ಜಯ ಹರಿ ಪುರಂದರ ವಿಟ್ಠಲನ ಬಲವಯ್ಯ ಸುಜನರಿಗೆ ॥

## ತ ತ್ವಾ ಭಿ ಮಾ ನಿ ದೇ ವ ತಾ ಸ್ತು ತಿ : ರಾ ಗ – ನಾ ಟಿ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ ।
ಮತಿ ಪ್ರೇರಿಸುವಳು ಪಾರ್ವತಿ ದೇವಿ ಮು–
ಕುತಿ ಪಥಕೆ ಮನವೀವ ಮಹರುದ್ರ ದೇವರು । ಭ
ಕುತಿದಾಯಕಳು ಸಿರಿ ಭಾರತೀದೇವಿ ಯು–
ಕುತಿ ಶಾಸ್ತ್ರಗಳಲ್ಲಿ ವನಜಸಂಭವನರಸಿ
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿಯಿತ್ತು
ಗತಿ ಪಾಲಿಸುವ ನಮ್ಮ ಪವಮಾನನು ।
ಚಿತ್ತದಲಿ ಆನಂದ ಸುಖವನೀವಳು ರಮಾ । ಭ
ಕುತ ಜನರೊಡೆಯ ನಮ್ಮ ಪುರಂದರವಿಟ್ಠಲನು
ಸತತ ಇವರಲಿ ನಿಂತು ಈ ಕೃತಿಯ ನಡೆಸುವನು ॥

www.vijayadasaru.net

## ಹ ರಿ ದಾ ಸ ರ ಪ ರ ವಾ ದ ಹಾ ಡು




ರಾ ಗ – ಶ ಂ ಕ ರಾ ಭ ರ ಣ : ತಾ ಳ – ಆ ದಿ ತಾ ಳ

ಗುರು ಮಧ್ವರಾಯರಿಗೆ ನಮೋ ನಮೋ ।
ಗುರು ಮಧ್ವ ಸಂತತಿಗೆ ನಮೋ ನಮೋ ।ಪ।

ಶ್ರೀಪಾದರಾಜರಿಗೆ ಗುರು ವ್ಯಾಸರಾಜರಿಗೆ ।
ಗುರು ವಾದಿರಾಜರಿಗೆ ನಮೋ ನಮೋ ।೧।

ರಾಘವೇಂದ್ರರಾಯರಿಗೆ ವೈಕುಂಠ ದಾಸರಿಗೆ
ಪುರಂದರದಾಸರಿಗೆ ನಮೋ ನಮೋ ।೨।

ಗುರು ವಿಜಯದಾಸರಿಗೆ ಭಾಗಣ್ಣ ದಾಸರಿಗೆ ।
ಶ್ರೀರಂಗವಲಿದ ದಾಸರಿಗೆ ನಮೋ ನಮೋ ।೩।

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ ।
ಹುಂಡೇಕಾರ ದಾಸರಿಗೆ ನಮೋ ನಮೋ ।೪।

ಗುರುಶ್ರೀಶವಿಟ್ಠಲನ ಪರಮ ಭಕ್ತರ ।
ಚರಣಾರವಿಂದಕೆ ನಮೋ ನಮೋ ।೫।

## ದಾ ಸ ಕ ಕ್ಷೈ

## ಶ್ರೀ ಜ ಗ ನ್ನಾ ಥ ದಾ ಸ ರು



ಜಲಜೇಷ್ಟನಿಭಾಕಾರಂ ಜಗದೀಶಪದಾಶ್ರಯಂ ।
ಜಗತೀತಲವಿಖ್ಯಾತಂ ಜಗನ್ನಾಥಗುರುಂ ಭಜೇ ॥

ಕಮಲಗಳಿಗೆ ಪ್ರೀತಿಪಾತ್ರನಾದ ಸೂರ್ಯನಂತೆ ಇರುವ ಭಗವಂತನ ಪಾದವನ್ನು ಆಶ್ರಯಿಸಿರುವ ಜಗತ್ತಿನಲ್ಲಿ ವಿಖ್ಯಾತರಾದ ಜಗನ್ನಾಥದಾಸರನ್ನು ಭಜಿಸುತ್ತೇನೆ.

(ಆ ರಾ ಧ ನೆ : ಭಾ ದ್ರ ಪ ದ ಶು ಕ್ಲ ಪ ಕ್ಷ ನ ವ ಮಿ )



ರಾ ಗ – ಮೋ ಹ ನ : ತಾ ಳ – ಆ ದಿ ತಾ ಳ

ತಿಳಿಯೆನು ಎಂದೆಂದಿಗನ್ಯ – ರಂಗ
ಒಲಿದ ದಾಸರು ಜಗನ್ಮಾನ್ಯ । ಪ ।

ಅಲವ ಮಹಾತ್ಮರೆಂಬ ಪುಣ್ಯ – ಕೀರ್ತಿ–
ಗಳ ಕೇಳ್ವನವ ಧನ್ಯ । ಅ ಪ ।

ಹಿರಣ್ಯಕಶಿಪುಜ ಸಹ್ಲಾದನೇ
ಎರಡನೆಯ ಜನ್ಮದಿ ಶಲ್ಯನಾದ
ಗುರು ವಾದಿರಾಜರನರ್ಚಿಸಿದ ಪುರಂ
ದರದಾಸರಾಯರಲ್ಲುದಿಸಿದ । ೧ ।

ಐದನೆಯ ರೂಪವೀಗಿದಂತೆ – ಬ
ಹುದು ಏಳುಜನ್ಮ ಮುಂದಂತೆ
ಮೋದಾಭಿವೃದ್ಧಿಗೇನೋ ಅಂತೆ – ಎಂಬ
ವಾದಿಗಿದೆಲ್ಲ ಅಂತೆ ಕಂತೆ । ೨ ।

ದಾಸಕೂಟಸ್ಥರಿಗೀ ಮಾತು – ಕೆಲವು
ದೇಶಗಳಲ್ಲಿ ಅನುಭವವಾಯ್ತು
ಈಸು ಕಥಾಲಾಪವಲ್ಲಾಯಿತು – ಶ್ರೀ ಪ್ರಾ
ಣೇಶವಿಟ್ಠಲನಲ್ಲಿಹನಾತು ।೩।

ರಾ ಗ – ಸಾ ರ ಂ ಗ : ತಾ ಳ – ಝ ಂ ಪೆ ತಾ ಳ

ಎಂತು ಪೊಗಳಲಿ ಜಗನ್ನಾಥ ದಾಸರನ ।
ಕಂತು ಪಿತ ಒಲಿದಿವರ ಅಂತರಂಗದಿ ಪೊಳೆವ ।ಪ।

ಶ್ರೀ ರಮಾದೇವಿ ಪತಿಯೊಡನೆ ಇವರಲಿ ನಿಂತು ।
ಈರೆರಡು ದೇಹ ಅವ್ಯಕ್ತ ಸಹಿತ ॥
ಆರುನಾಲಕು ತತ್ವದಭಿಮಾನಿಗಳ ಕೂಡಿ ।
ಮೂರು ಗುಣ ಕಾರ್ಯಗಳ ಮಾಡಿ ತೋರ್ಪಳು ಸುಖವ ।೧।

ಚತುರ ಮುಖ ವಾಯು ನಿಜಸತಿಯರಿಂದೊಡಗೂಡಿ ।
ಇತರ ದೇವತೆಗಳು ಸತತ ಯಿದ್ದು ॥
ವಿತತ ಮಹಿಮನ ಸೇವಿಸುತಲಿ ಸುಜ್ಞಾನವನು ।
ಹಿತದಿಂದಿವರಿಗಿತ್ತು ಅತಿ ತೋಷ ಪಡಿಸುವರು ।೨।

ಕರಣ ಮಾನಿಗಳು ಶಿವ ಇಂದ್ರ ಸೂರ್ಯರು ತಾವ್ ।
ಇವರಧಿಷ್ಠಾನದಲಿ ಹರಿಗರ್ಪಿಸಿ ॥
ಸುರನರರ ತರತಮವ ಅರುಪಿ ಪಂಚ ಭೇದವನು ।
ಹರಿದಾಸ್ಯವಿತ್ತು ಪರಿಶೋಭಿಸುವರನುದಿನದಿ ।೩।

ಈ ಪರಿ ನಿರಂತರದಿ ಆಪಾದಮೌಳಿ ತವ
ಕಾಪಯೋಜಜ ಮುಖರ ರೂಪಗಳಲಿ
ಆ ಪರಮಪುರುಷನ ಸುವ್ಯಾಪಾರ ನೋಡುತಲಿ
ಆಪಾರಮಹಿಮನ ಸ್ವರೂಪ ಸ್ಮರಿಸುತಲಿ ।೪।

ಈ ಸುಮನಸರ ಮಹಿಮೆ ಸೋಸಿನಲಿ ತಿಳಿದವರ
ದಾಸನಾದವನ ಅಘನಾಶವಾಹುದು
ಕಾಶಿನಾಶೆಗೆ ನರರ ದಾಸನಾದವನು ಗುರು
ಶ್ರೀಶವಿಟ್ಠಲನ ನಿಜ ದಾಸರನು ಬಲ್ಲನೇ ? ।೫।

ರಾಗ – ಯದುಕುಲಕಾಂಬೋದಿ : ತಾಳ – ಅಟತಾಳ

ರಂಗವಲಿದ ರಾಯರ ನೀ ನೋಡೊ ಅಂತ
ರಂಗದಿ ಪಾಡೊ ।ಪ।

ಭಂಗ ಪಡಿಪ ದುರಿತಂಗಳ ಈಡ್ಯಾಡೊ ಸತ್
ಸಂಗವ ಬೇಡೊ ।ಅ ಪ।

ಹಿಂದೆ ಮೂರೊಂದವತಾರ ಧರಿಸಿದಾತ
ಇದು ಪಿರಿಯರ ಮಾತ
ಬಂದ ಮರಳಿ ಮಹೀತಳದಿ ಜಗನ್ನಾಥ
ದಾಸಾರ್ಯ ಪ್ರಖ್ಯಾತ
ತಂದೆ ನಮಗೆ ತಿಳಿ ಎಂದೆಂದಿಗೂ ಈತ
ಆನಂದ ಪ್ರದಾತ ।೧।

ಬಣ್ಣಿಸಲೆಗಿನ್ನೊಶವೆ ಇವರ ಚರಿಯ
ಜಗದೊಳಗಾಶ್ಚರ್ಯ
ಕಣ್ಣುಗಳಿಂದ ಕಾಣುತ ಪೂರ್ಣಯ್ಯ
ತಾನಾಗಿ ವಿಧೇಯ
ಧನ್ಯನೆನಿಸಿ ಸತ್ಪುಣ್ಯ ಪಡೆದುದರಿಯ
ಪುಸಿಯಲ್ಲವೊ ಖರೆಯ ।೨।

ದಾಸಾರ್ಯರು ವಾಸಗೈದ ಸ್ಥಾನ
ಗಯ ಕಾಶಿ ಸಮಾನ

www.vijayadasaru.net

ಲೇಸುಭಕ್ತಿಲಿ ಸೇವಿಸಲನುದಿನ
ಕೊಡುವರು ಸುಜ್ಞಾನ
ಈ ಸನ್ಮಹಿಮರ ದೂಷಿಸುವನೆ ಶ್ವಾನ
ಯಾತಕನುಮಾನ ।೩।

ನಿಗಮವಾಣಿಯನುಸಾರ ನಿರ್ಮಿಸಿರುವ
ದೇಹಾಖ್ಯ ರಥವ
ಸೊಗಸಿಲಿಂದ ತಾನೇರಿ ನಗುತ ಬರುವ
ಚತುರ್ದಿಕ್ಕಿಲಿ ಮೆರೆವ
ಮಿಗೆ ವಿರೋಧಿಸುವ ಪಗೆಗಳ ಪಲ್ಮುರಿವ
ಪೊಗಳುವರಘ ತರಿವ ।೪।

ಶ್ಯಾಮಸುಂದರ ಸುಖತಾಮೃತ ಸಾರ
ರಚಿಸಿದ ಬಹು ಚತುರ
ಪಾಮರ ಜನರನು ಪ್ರೇಮದಿ ಉದ್ಧಾರ
ಮಾಡಲು ಗಂಭೀರ
ಶ್ರೀಮನ್ಮಾನವಿ ಕ್ಷೇತ್ರವೆ ನಿಜಾಗಾರ
ಎಂದೆನಿಸಿದ ಧೀರ

# ಶ್ರೀ ಮೋ ಹ ನ ದಾ ಸ ರು



ಮೋಹಭಯ ದುಃಖಾದಿದೂರಂ ಲೋಹಲೋಷ್ಠ ಸಮೇಕ್ಷಣಂ ।
ಮಾಹಿತಾಂಘ್ರಿ ಸರೋಜಭೃಂಗಂ ಮೋಹನಾರ್ಯಗುರುಂ ಭಜೇ ॥

ಮಮಕಾರ, ಹೆದರಿಕೆ ಮತ್ತು ದುಃಖವಿಲ್ಲದವರೂ, ಬಂಗಾರ, ಬೆಳ್ಳಿ ಮೊದಲಾದ ಬೆಲೆಬಾಳುವ ವಸ್ತುಗಳೂ, ಕಲ್ಲೂ ಒಂದೇ ಎಂದು ಕಾಣುವ, ಸರ್ವೋತ್ತಮನಾದ ಶ್ರೀಹರಿಯ ಪಾದಕಮಲಕ್ಕೆ ದುಂಬಿಯಂತೆ ಸೇರಲು ಆಸಕ್ತರಾದ ಗುರುಗಳಾದ, ಮೋಹನದಾಸವರ್ಯರನ್ನು ಭಜನೆ ಮಾಡುತ್ತೇನೆ.

( ಆ ರಾ ಧ ನೆ : ಜ್ಯೇ ಷ್ಠ ಶು ದ್ಧ ಷ ಷ್ಠೀ )

ರಾ ಗ – ನಾ ದ ನಾ ಮ ಕ್ರಿ ಯೆ : ತಾ ಳ – ಆ ದಿ ತಾ ಳ

ಪಾಹಿ ಪಾಹಿ ಗುರು ಮೋಹನರಾಯ ।ಪ।

ಪಾಹಿ ಪಾಹಿ ಗುರು ಮೋಹನ ಸಿಂಧುರ
ವಾಹನ ಪದಪಂಕೇರುಹಭೃಂಗ ।ಅ ಪ।

ನವವಿಧ ಭಕುತಿಗಳೆಂಬೊ ಸರಪಳಿಯೊಳು
ನವನವ ರೂಪದಿ ನಲಿವ ಸುಧೀರ ।೧।

ಪದುಮನಾಭನ ಧ್ಯಾನದ ಮದವೇರಿ
ಪದೆಪದೆಗೆ ಹರಿಪದವಗಾವಾ ।೨।

ವಿಜಯದಾಸರ ಪದರಜವ ಧರಿಸಿ ವೀ
ರಜಪ್ರಾಣೇಶವಿಟ್ಠಲನ ಭಜಿಸಿ ।೩।

www.vijayadasaru.net



# ಶ್ರೀ ಗೋ ಪಾ ಲ ದಾ ಸ ರು




ಗೋಪಪ್ರಖರ ಸಂಕಾಶಂ ಗೋಪಾಲಾರ್ಚನ ತತ್ಪರಂ ।
ಗೋದೇವ ವಂದ್ಯ ಪಾದಾಬ್ಜಂ ಗೋಪಾಲಾಖ್ಯ ಗುರುಂ ಭಜೇ ॥

ಸೂರ್ಯನಂತೆ ಪ್ರಖರ ಪ್ರಕಾಶವುಳ್ಳ ಗೋಪಾಲನ ಆರಾಧನೆಯಲ್ಲಿ ಆಸಕ್ತರಾದ, ಭೂಮಿಯಲ್ಲಿ ದೇವತೆಗಳಂತೆ ಇರುವ ಬ್ರಾಹ್ಮಣರಿಂದ ಪೂಜಿತವಾದ ಪಾದಕಮಲವುಳ್ಳ, ಗುರುಗಳಾದ ಗೋಪಾಲದಾಸರನ್ನು ಭಜಿಸುವೆ.

ಆಗತಾದಿ ತ್ರಿಕಾಲಜ್ಞಂ । ಆಗಮಾರ್ಥ ವಿಶಾರದಂ ।
ತ್ಯಾಗಭೋಗ ಸಮಾಯುಕ್ತಂ ಭಾಗಣ್ಣಾರ್ಯ ಗುರುಂ ಭಜೇ ॥

ಭೂತಭವಿಷ್ಯತ್ ವರ್ತಮಾನ ಕಾಲಗಳ ಜ್ಞಾನವಿರುವ, ವೇದಾರ್ಥ–ವನ್ನು ತಿಳಿಸುವುದರಲ್ಲಿ ನಿಸ್ಸೀಮರಾದ ತ್ಯಾಗ ಭೋಗಗಳೆರಡನ್ನೂ ಸಮನಾಗಿ ಕಾಣುವ ಗುರು ಭಾಗಣ್ಣದಾಸರನ್ನು ನಮಿಸುವೆ.

www.vijayadasaru.net



ಭೂಪಾಲನತಪಾದಾಬ್ಜಂ ಪಾಪಾಲಿಪರಿಹಾರಿಣಂ ।
ಗೋಪಾಲದಾಸಮೀಡೇಽಹಂ ಗೋಪಾಲಹರಿದರ್ಶನಂ ॥

ರಾಜರುಗಳಿಂದ ನಮಸ್ಕೃತಪಾದಕಮಲವುಳ್ಳ ಪಾಪಗಳ ಸಮೂಹವನ್ನು ದೂರೀಕರಿಸುವ ಭಗವಂತನ ಜ್ಞಾನವನ್ನು ಪಡೆದ ಗೋಪಾಲದಾಸರನ್ನು ಸ್ತೋತ್ರಮಾಡುವೆ.

( ಆ ರಾ ಧ ನೆ : ಪು ಷ್ಯ ಕೃ ಷ್ಣ ಪ ಕ್ಷ ಅ ಷ್ಟ ಮಿ )



ರಾ ಗ – ಮೋ ಹ ನ : ತಾ ಳ – ಅ ಟ ತಾ ಳ

ಗೋಪಾಲದಾಸರಾಯರ ದಿವ್ಯ ಚರಣಗಳು
ಕಾಪಾಡಲೆನ್ನ ಸತತ । ಪ ।

ತಾಪಸೋತ್ತಮ ವಿಜಯರಾಯರ ಕೃಪಾಜಾಹ್ನ
ವೀ ಪ್ರವಾಹದೊಳು ತೇಲಿ ಶೋಭಿಸುತಿರುವ । ಅ ಪ ।

ಇವರ ಪೂಜೆಯೆ ನಮ್ಮ ವಿಜಯರಾಯರ ಪೂಜೆ
ಇವರ ದಯವೇ ವಿಜಯರಾಯರ ದಯವು
ಇವರ ಕೊಂಡಾಡುವುದೇ ವಿಜಯರಾಯರ ಸ್ತೋತ್ರ
ಇವರೇ ವಿಜಯರಾಯರ ಮುಖ್ಯ ಪ್ರತಿಮಾ । ೧ ।

ವೈರಾಗ್ಯ ಹರಿಭಕ್ತಿ ವಿಜ್ಞಾನಗಳ ಕೊಟ್ಟು
ಘೋರ ದುರಿತಗಳೋಡಿಸಿ
ಶ್ರೀರಮಣನ ಪದ ತೋರುವವರು ಬಿಡದೆ ಈ
ಸೂರಿಗಳ ನಂಬಿದವ ಧನ್ಯ ಮಾನ್ಯ । ೨ ।

ವರದಗೋಪಾಲ ಗುರುಗೋಪಾಲ
ಶ್ರೀರಂಗ ವಲಿದ ದಾಸರು ಈ ಮಹಾ
ಕರುಣಾಳುಗಳ ನಂಬಿ ಹರಿಭಕುತರೆನಿಸಿದರು
ಮರುದೀಶ ಬಾದರಾಯಣವಿಟ್ಠಲನ ಪ್ರಿಯ । ೩ ।

## ಶ್ರೀ ವಿ ಜ ಯ ದಾ ಸ ರು



ಅಜ್ಞಾನತಿಮಿರಚ್ಛೇದಂ ಬುದ್ಧಿ ಸಂಪತ್ಪ್ರದಾಯಕಂ ।
ವಿಜ್ಞಾನವಿಮಲಂ ಶಾಂತಂ ವಿಜಯಾಖ್ಯಗುರುಂ ಭಜೇ ॥

ಅಜ್ಞಾನವೆಂಬ ಅಂಧಕಾರವನ್ನು ನಾಶಮಾಡುವ ಬುದ್ಧಿ ಸಂಪತ್ತನ್ನು ನೀಡುವ ಜ್ಞಾನದಿಂದ ಪವಿತ್ರಸ್ವರೂಪರಾದ ಭಗವಂತನಲ್ಲಿಯೇ ಮಗ್ನರಾದ ವಿಜಯದಾಸರನ್ನು ಭಜಿಸುತ್ತೇನೆ.

( ಆ ರಾ ಧ ನೆ : ಕಾ ರ್ತೀ ಕ ಶು ಕ್ಲ ಪ ಕ್ಷ ದ ಶ ಮಿ )

www.vijayadasaru.net



# ಶ್ರೀ ವಿ ಜ ಯ ರಾ ಯ ರ ಕ ವ ಚ

## (ಶ್ರೀವ್ಯಾಸವಿಟ್ಠಲ ವಿರಚಿತ ನಕ್ಷತ್ರ ಮಾಲಿಕಾ ಸ್ತೋತ್ರ)



ಪರಿಷ್ಕೃತ ಪಾಠ

ಸಿದ್ಧಪಡಿಸಿದವರು : ಶ್ರೀ ಎ ಎನ್ ಅನಂತಸ್ವಾಮಿರಾವ್ (ಅನಂತವಿಟ್ಠಲದಾಸ)

**ವಿನಂತಿ**

ಬೆಂಗಳೂರಿನ ಶ್ರೀ ಎ ಎನ್ ಅನಂತಸ್ವಾಮಿರಾವ್ (ಅನಂತವಿಟ್ಠಲದಾಸ) ಅವರು ವಿಶೇಶ ಶ್ರದ್ಧಾ ಭಕ್ತಿಗಳಿಂದ 'ವಿಜಯ ಕವಚ' ದ ಅನೇಕ ಪ್ರಚಲಿತ ಪಾಠಗಳನ್ನು ಸಂಗ್ರಹಿಸಿ ಪಾಠ ಪ್ರಭೇದಗಳ ಸಾಧಕ ಬಾಧಕಗಳನ್ನು ವಿಮರ್ಶಿಸಿ ಸಾರ್ವತ್ರಿಕ ಅನುಸರಣೆಗಾಗಿ ಒಂದು ಪರಿಷ್ಕೃತ ಪಾಠವನ್ನು ಸಿದ್ಧಪಡಿಸಿದ್ದಾರೆ. ಈ ಪರಿಷ್ಕೃತ ಪಾಠವನ್ನು ಕೂಲಂಕುಷವಾಗಿ ಪರಿಶೀಲಿಸಿ, ಒಂದು ನಿರ್ದಿಷ್ಟ ಪಾಠದ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಇದಕ್ಕೆ ನಮ್ಮ ಸಮ್ಮತಿಯನ್ನು ಸೂಚಿಸಿರುವುದಲ್ಲದೆ ಇನ್ನು ಮುಂದೆ ಸಾರ್ವತ್ರಿಕವಾಗಿ ಭಕ್ತಾದಿಗಳು ಈ ಪರಿಷ್ಕೃತ ಪಾಠವನ್ನು ಅನುಸರಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಮೊಕ್ಕಾಂ : ಬೆಂಗಳೂರು

ಸಿ.ಹೆಚ್. ಜಗನ್ನಾಥದಾಸ್
ಚಿಪ್ಪಗಿರಿಯ ಶ್ರೀ ವಿಜಯರಾಯರ ಕಟ್ಟೆಯ
ಪರ್ಯಾಯಸ್ಥರ ಪರವಾಗಿ

ತಾರೀಖು : ೨೮–೧೦–೧೯೯೯

ರಾ ಗ – ಸೌ ರಾ ಷ್ಟ್ರ ( ಗೋ ಪೀ ಗೀ ತೆ ಮ ಟ್ಟು ) ತಾ ಳ – ಆ ದಿ ತಾ ಳ

ಸ್ಮರಿಸಿ ಬದುಕಿರೊ ದಿವ್ಯ ಚರಣಕೆರಗಿರೊ
ದುರಿತ ತರಿದು ಪೊರೆವ ವಿಜಯಗುರುಗಳೆಂಬರ ।ಪ।

ದಾಸರಾಯನ ದಯವ ಸೂಸಿ ಪಡೆದನಾ
ದೋಷರಹಿತನಾ ಸಂತೋಷಭರಿತನಾ ।೧।

ಜ್ಞಾನವಂತನಾ ಬಲುನಿಧಾನಿ ಶಾಂತನ
ಮಾನವಂತನಾ ಮಹವದಾನ್ಯ ದಾಂತನಾ ।೨।

ಹರಿಯ ಭಜಿಸುವಾ ನರಹರಿಯ ಯಜಿಸುವಾ
ದುರಿತ ತ್ಯಜಿಸುವಾ ಜನಕೆ ಹರುಷ ಸುರಿಸುವಾ ।೩।

ಮೋದಭರಿತನಾ ಪಂಚಭೇದವರಿತನಾ
ಸಾಧು ಚರಿತನಾ ಮನೋವಿಷಾದ ಮರೆತನಾ ।೪।

ಇವರ ನಂಬಿದಾ ಜನಕೆ ಭವವಿದೆಂಬುದೂ
ಹವಣವಾಗದೂ ನಮ್ಮವರ ಮತವಿದು ।೫।

ಪಾಪಕೋಟಿಯಾ ರಾಶಿ ಲೇಪವಾಗದೂ
ತಾಪಕಳೆವನೂ ಬಲು ದಯೋಪಯೋನಿಧೀ ।೬।

ಕವನ ರೂಪದಿ ಹರಿಯ ಸ್ತವನ ಮಾಡಿದಾ
ಭುವನ ಬೇಡಿದ ಮಾಧವನ ನೋಡಿದಾ ।೭।

ರಂಗನೆಂದನಾ ಭವವು ಹಿಂಗಿತೆಂದನಾ
ಮಂಗಳಾಂಗನಾ ಅಂತರಂಗವರಿತನಾ ।೮।

ಕಾಶಿನಗರದಲ್ಲಿದ್ದ ವ್ಯಾಸದೇವನಾ
ಸೂಸಿ ಭಜಿಸಿದಾ ಉಲ್ಲಾಸತನದಲೀ ।೯।

ಚಿಂತೆಬ್ಯಾಡಿರೋ ನಿಶ್ಚಿಂತರಾಗಿರೋ
ಶಾಂತಗುರುಗಳಾ ಪಾದವಾಂತು ನಂಬಿರೋ ।೧೦।

ಖೇದವಾಗದೂ ನಿಮಗೆ ಮೋದವಾಹುದೂ
ಸಾಧುಗುರುಗಳಾ ದಿವ್ಯ ಪಾದ ನಂಬಿರೋ ।೧೧।

ತಾಪ ತಡೆವನೂ ಬಂದ ಪಾಪ ಕಡಿವನೂ
ಶ್ರೀಪತಿಯ ಪಾದದಾ ಸಮೀಪವಿಡುವನು ।೧೨।

ಗಂಗೆ ಮಿಂದರೆ ಮಲವು ಹಿಂಗಿತಲ್ಲದೇ
ರಂಗನೊಲಿಯನೂ ಭಕ್ತರ ಸಂಗ ದೊರೆಯದೇ ।೧೩।

ವೇದ ಓದಲು ಬರಿದೆ ವಾದ ಮಾಡಲೂ
ಹಾದಿ ದೊರೆಯದೂ ಬುಧರ ಪಾದ ನಂಬದೆ ।೧೪।

ಲೆಕ್ಕವಿಲ್ಲದಾ ದೇಶ ತುಕ್ಕಿ ಬಂದರೂ
ದುಃಖವಲ್ಲದೇ ಲೇಶ ಭಕ್ತಿ ದೊರಕದೊ ।೧೫।

ದಾನಮಾಡಲೂ ದಿವ್ಯ ಗಾನ ಪಾಡಲು
ಜ್ಞಾನ ದೊರೆಯದು ಇವರಧೀನವಾಗದೇ ।೧೬।

ಇಷ್ಟಿ ಯಾತಕೇ ಕಂಡ ಕಷ್ಟವ್ಯಾತಕೇ
ದಿಟ್ಟಗುರುಗಳಾ ಪಾದ ಮುಟ್ಟಿ ಭಜಿಸಿರೊ ।೧೭।

ಪೂಜೆ ಮಾಡಲೂ ಕಂಡ ಗೋಜು ಬೀಳಲೂ
ಬೀಜಮಾತಿನ ಫಲ ಸಹಾಜ ದೊರಕದೂ ।೧೮।

ಸುರರು ಎಲ್ಲರೂ ಇವರ ಕರವ ಪಿಡಿವರೂ
ತರಳರಂದದೀ ಹಿಂದೆ ತಿರುಗುತಿಪ್ಪರೂ । ೧೯ ।

ಗ್ರಹಗಳೆಲ್ಲವೂ ಇವರ್ಗೆ ಸಹಾಯವಾಗುತ
ಅಹೋರಾತ್ರಿಲಿ ಸುಖದ ನಿವಹ ಕೊಡುವವು ।  ೨೦ ।

ವ್ಯಾಧಿ ಬಾರದೂ ದೇಹ ಬಾಧೆ ತಟ್ಟದೂ
ಆದಿದೇವನಾ ಸುಪ್ರಸಾದವಾಹುದೂ । ೨೧ ।

ಪತಿತ ಪಾಮರ ಮಂದಮತಿಯು ನಾ ಬಲು
ತುತಿಸಲಾಪೆನೇ ಇವರ ಅತಿಶಯಂಗಳಾ । ೨೨ ।

ಕರುಣದಿಂದಲೀ ಎಮ್ಮ ಪೊರೆವನಲ್ಲದೇ
ದುರಿತ ಕೋಟಿಯಾ ಬೇಗ ತರಿವ ದಯದಲೀ । ೨೩ ।

ಮಂದಮತಿಗಳೂ ಇವರ ಚೆಂದವರಿಯದೇ
ನಿಂದೆ ಮಾಡಲೂ ಭವದ ಬಂಧ ತಪ್ಪದೂ । ೨೪ ।

ಇಂದಿರಾಪತಿ ಇವರ ಮುಂದೆ ಕುಣಿವನೂ
ಅಂದ ವಚನವಾ ನಿಜಕೆ ತಂದು ಕೊಡುವನು । ೨೫ ।

ಉದಯಕಾಲದಿ ಈ ಪದವ ಪಠಿಸಲೂ
ಮದಡನಾದರೂ ಜ್ಞಾನ ಉದಯವಾಹುದೂ । ೨೬ ।

ಸಟೆಯಿದಲ್ಲವೊ ವ್ಯಾಸವಿಟ್ಠಲ ಬಲ್ಲನೂ
ಪಠಿಸಬಹುದಿದೂ ಕೇಳಿ ಕುಟಿಲ ರಹಿತರೂ । ೨೭ ।

ರಾ ಗ – ಧ ನ್ಯಾ ಸಿ (ಸು ರ ಟಿ) : ತಾ ಳ – ಆ ದಿ ತಾ ಳ

ತಂದೆ ವಿಜಯರಾಯ ವ್ಯಾಳಿಗೆ
ಬಂದ್ಯೊ ವಿಜಯರಾಯ ।ಪ।

ಹಿಂದೇಸು ಜನ್ಮವು ಮುಂದೇಸು ಜನ್ಮವು
ಒಂದು ತಿಳಿಯದೆಂದೆಂದಿಗು ಎನ್ನಯ ।ಅ ಪ।

ಸೂರ್ಯನ ಸುತನಂತೆ ಅಲ್ಲಿ ಮಹ
ಶೌರ್ಯ ದೂತರಂತೆ
ಕಾರ್ಯಾಕಾರ್ಯವು ತಿಳಿಯದೆ ನಿನ್ನ ಪರಿ
ಚಾರ್ಯನ ಎಳೆತರೆ ಬಾರ್ಯಳು ಮೊರೆಯಿಡೆ ।೧।

ಅದೇ ಧೈರ್ಯನೋಡಿ ಸುದತಿ ತಾ
ಹೃದಯ ಬದ್ಧಮಾಡಿ
ಮಧುಸೂದನನೆ ಮುದತೀರಥರೆಂ
ದೊದರಿದಳೊದರಿದಳ್ ವಿಜಯರಾಯರೆಂದು ।೨।

ಕರಗಳನೇ ಕಟ್ಟಿ ಎಳೆಯುತಿರೆ
ಶಿರವನೆ ಮೆಟ್ಟಿ
ಸಿರಿಮೋಹನವಿಟ್ಠಲನ ಪದವ ತೋರಿ
ಧರಿಗೆ ತಂದುಬಿಟ್ಟೆ ಕರುಣಾಳುವೆ ಎನ್ನ ।೩।

ರಾ ಗ – ಮೋ ಹ ನ : ತಾ ಳ – ಝಂ ಪೆ ತಾ ಳ

ವಿಜಯರಾಯರ ಪಾದ ನಿಜವಾಗಿ ನಂಬಲು
ಅಜನಪಿತ ತಾನೆ ಒಲಿವಾ ।ಪ।

ದ್ವಿಜಕೇತನನ ಗುಣ ಪ್ರಜವ ಕೊಂಡಾಡುವ
ಸುಜನ ಮಂದಾರ ನೀತಾ ದಾತಾ ।ಅ ಪ।



ವಿ ಎಂದು ನುಡಿಯಲು ವಿಷ್ಣುದಾಸನಾಗುವನು
ಜ ಎನಲು ಜನನ ಹಾನಿ
ಯ ಎಂದು ಕೊಂಡಾಡೆ ಯಮಭಟರು ಓಡುವರು
ರಾಯ ಎಂದೆನಲು ಹರಿಕಾವ ವರವೀವ ।೧।


ಇವರ ಸ್ಮರಣೆಯೆ ಸ್ನಾನ ಇವರ ಸ್ಮರಣೆಯೆ ಧ್ಯಾನ
ಇವರ ಸ್ಮರಣೆಯೆ ಅಮೃತಪಾನ
ಇವರ ಸ್ಮರಣೆಯ ಮಾಡೆ ಯುವತಿಗಕ್ಷಯವಿತ್ತ
ತ್ರಿವಿಕ್ರಮನೆ ಮುಂದೆ ನಿಲುವ ನಲಿವ ।೨।

ವಾರಣಾಸಿಯ ಯಾತ್ರೆ ಮೂರು ಬಾರಿ ಮಾಡಿ
ಮಾರಪಿತನೊಲುಮೆಯನು ಪಡೆದು
ಮೂರಾವತಾರದ ಮಧ್ವ ಮುನಿರಾಯರ
ಚಾರುಚರಣವನು ಭಜಿಪ ಮುನಿಪ ।೩।

ಪುರಂದರದಾಸರ ಪರಮಾನುಗ್ರಹ ಪಾತ್ರ
ಗುರು ವಿಜಯರಾಯನೀತ
ಸಿರಿ ವಿಜಯವಿಟ್ಠಲನ ಶ್ರೀನಿವಾಸಾರ್ಯರು
ಹರಿಯಾಜ್ಞೆಯಿಂದ ಕೊಟ್ಟರು ಧಿಟ್ಟರು ।೪।

ದಾನ ಧರ್ಮಗಳು ಮಾಡುವಲ್ಲಿ ಔದಾರ್ಯ ಗುಣ ಶೌರ್ಯ
ಶ್ರೀನಿವಾಸನ ಪ್ರೇಮ ಕುಮಾರ
ಮಾನವಿ ಸೀಮಿ ಚೀಕನ ಬರವಿ ವೋ
ಹನ್ನವಿಟ್ಠಲನ ನಿಜದಾಸನೀತ ಖ್ಯಾತ ।೫।

## ಶ್ರೀ ಪು ರ ಂ ದ ರ ದಾ ಸ ರು



ಮನ್ಮನೋಽಭೀಷ್ಟ ವರದಂ ಸರ್ವಾಭೀಷ್ಟ ಫಲಪ್ರದಂ ।
ಪುರಂದರ ಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ ॥

ನಮ್ಮ ಮನಸ್ಸಿನಲ್ಲಿರುವ ಅಭೀಷ್ಟವನ್ನು ಪೂರೈಸುವ ಎಲ್ಲ ಅಭಿಲಾಷೆ–ಗಳನ್ನು ಫಲಿಸುವಂತೆ ಮಾಡುವ ದಯಾನಿಧಿಗಳಾದ ದಾಸಶ್ರೇಷ್ಠರಾದ ಪುರಂದರ ಗುರುಗಳನ್ನು ವಂದಿಸುವೆ.

( ಆ ರಾ ಧ ನೆ : ಪು ಷ್ಯ ಬ ಹು ಳ ಅ ಮಾ ವಾ ಸ್ಯೆ )




ರಾ ಗ – ಕಾ ಂ ಬೋ ದಿ : ತಾ ಳ – ಝ ಂ ಪೆ ತಾ ಳ

ದಾಸರೆಂದರೆ ಪುರಂದರ ದಾಸರಯ್ಯ ।ಪ।

ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವಂಥ ।ಅ ಪ।


ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು
ದಾಸನೆಂದು ತುಳಸಿ ಮಾಲೆ ಧರಿಸೀ
ಬೇಸರಿಲ್ಲದೆ ಅವರ ಕಾಡಿ ಬೇಡಿ ಬಳಲಿಸುತ
ಕಾಸುಗಳಿಸುವ ಪುರುಷ ಹರಿದಾಸನೇ ।೧।

ಡಂಭಕದಿ ಹರಿಸ್ಮರಣೆ ಮಾಡಿ ಜನರ ಮುಂದೆ
ಸಂಭ್ರಮದಿ ತಾನುಂಬ ಊಟ ಬಯಸೀ
ಅಂಬುಜೋದ್ಭವ ಪಿತನ ಆಗಮಗಳರಿಯದೆ
ತಂಬೂರಿ ಮೀಟಲವ ಹರಿದಾಸನೇ ।೨।

ಪಾತಕನ ತೆರನಂತೆ ಪದಗಳನು ತಾ ಬೊಗಳಿ
ಕೂಟ ಜನರ ಮನವ ಸಂತೋಷಗೊಳಿಸೀ
ಗೂಟ ನಾಮಗಳಿಟ್ಟು ಕೊಟ್ಟರಿಯೆ ತಾನೆನುತ
ಬೂಟಕವ ಮಾಡಲವ ಹರಿದಾಸನೇ ।೩।

ಯಾಯಿವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ
ಪ್ರೀಯದಲಿ ತಾನೊಂದು ಕೊಡದ ಲೋಭಿ
ಮಾಯ ಸಂಸಾರದಲಿ ಮಮತೆ ಹೆಚ್ಚಾಗಿಟ್ಟು
ಗಾಯನವ ಮಾಡಲವ ಹರಿದಾಸನೇ ।೪।

ನೀತಿಯೆಲ್ಲವನರಿತು ನಿಗಮ ವೇದ್ಯನ ನಿತ್ಯ
ವಾತಸುತನಲ್ಲಿಹನ ವರ್ಣಿಸುತಲೀ
ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ
ಪೂತಾತ್ಮ ಪುರಂದರ ದಾಸರಿವರಯ್ಯ ।೫।



ರಾ ಗ – ಹ ಂ ಸ ಧ್ವ ನಿ : ತಾ ಳ – ರೂ ಪ ಕ ತಾ ಳ

ಗುರು ಪುರಂದರದಾಸರೆ ನಿಮ್ಮ ಚರಣಕಮಲವ ನಂಬಿದೆ ।ಪ।

ಗರುವರಹಿತನ ಮಾಡಿ ಎನ್ನನು ಪೊರೆವ ಭಾರವು ನಿಮ್ಮದೆ ।ಅ ಪ।

ಒಂದು ಅರಿಯದ ಮಂದಮತಿ ನಾನಿಂದು ನಿಮ್ಮನು ವಂದಿಪೆ
ಇಂದಿರೇಶನ ತಂದು ತೋರಿಸಿ ತಂದೆ ಮಾಡೆಲೊ ಸತ್ಕೃಪೆ ।೧।

ಪುರಂದರಘಾಡದೊಳಗೆ ನಿಂದು ನಿರುತ ದ್ರವ್ಯವ ಗಳಿಸಿದೆ
ಪರಮಪುರುಷನು ವಿಪ್ರನಂದದಿ ಕರವ ನೀಡಿ ಯಾಚಿಸೆ ।೨।

ಪರಮ ನಿರ್ಗುಣ ಮನವನರಿತು ಹರಿಗೆ ಸೂರೆಯ ನೀಡುತ
ಅರಿತು ಮನದೊಳು ಹರಿದು ಭವಗಳ ತರುಣಿ ಸಹಿತಾ ಹೊರಟನೆ।೩।

ಮಾರಜನಕನ ಸನ್ನಿಧಾನದಿ ಸಾರಗಾನವ ಮಾಡುವ
ನಾರದರೆ ಈ ರೂಪದಿಂದಲಿ ಚಾರುದರುಶನ ತೋರಿದ ।೪।

ಅಜಭವಾದಿಗಳರಸನಾದ ವಿಜಯವಿಟ್ಠಲನ ಧ್ಯಾನಿಪ
ನಿಜ ಸುಜ್ಞಾನವ ಕೊಡಿಸಬೇಕೆಂದು ಭಜಿಪೆನೊ ಕೇಳ್ ಗುರುವರ ।೫।

